ಜಾಜ್ವಲ್ಯೇತೇ ವಿಷ್ಣುವಾಯೂ ಸ್ಮ ದೇವೌ ವೇದವ್ಯಾಸಾನಂದತೀರ್ಥಾಭಿಧಾನೌ

# ಶ್ರೀವ್ಯಾಸ ಮಧ್ವ

(ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಮಾಸಪತ್ರಿಕೆ)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ,
ಬೆಂಗಳೂರು-೧೯. ದೂರವಾಣಿ : (080) 26602802; 26611011

**ಸಂಪಾದಕರು : ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ**

ಸಂಪುಟ -೨ ಸಂಚಿಕೆ –೧೨ ವಿರೋಧಿ (ಮಾಘ-ಫಾಲ್ಗುಣ) ಫೆಬ್ರವರಿ ೨೦೧೦

## ಶ್ರೀವ್ಯಾಸಸೂಕ್ತಿ

**ಗೃಹೇಷು ಯೇಷ್ವತಿಥಯೋ ನಾರ್ಚಿತಾಃ ಸಲಿಲೈರಪಿ ।**
**ಯದಿ ನಿರ್ಯಾಂತಿ ತೇ ನೂನಂ ಪ್ರೇತರಾಜಗೃಹೋಪಮಾಃ ॥**

- ಶ್ರೀಮದ್ಭಾಗವತ (೮/೧೫/೭)

ಮನೆಗೆ ಬಂದ ಅತಿಥಿಗಳನ್ನು ಬೇರೇನೂ ಇಲ್ಲವಾದಲ್ಲಿ ಕುಡಿಯಲು ನೀರನ್ನಾದರೂ ನೀಡಿ ಆದರಿಸಬೇಕು. ಅತಿಥಿಗಳು ನಿರಾಶರಾಗಿ ತೆರಳಿದಲ್ಲಿ ಅಂತಹ ಮನೆಗಳು ಮಸಣದಂತಾಗುವವು.

## ಶ್ರೀಮಧ್ವಸೂಕ್ತಿ

**ನಿಷಿದ್ಧಕಾಮಯುಕ್ತಾನಾಮಸತಾಂ ತು ವಿಶೇಷತಃ ।**
**ದುರ್ಜ್ಞೇಯೋ ಭಗವಾನ್ ವಿಷ್ಣುರ್ಹೃದಿಸ್ಥೋಽಸ್ಮೃತಹಾರವತ್ ॥**

- ಶ್ರೀಮದ್ಭಾಗವತತಾತ್ಪರ್ಯನಿರ್ಣಯ (೧೦/೯೪/೩೯)

ನಿಷಿದ್ಧಬಯಕೆ ಉಳ್ಳವರಿಗೆ, ವಿಶೇಷವಾಗಿ ದುಷ್ಟರಿಗೆ, ಹೃದಯದಲ್ಲಿ ನೆಲೆಸಿರುವ ಶ್ರೀಹರಿ ಗೋಚರಿಸಲಾರ - ವಿಸ್ಮೃತ ಕಂಠಹಾರದಂತೆ.

# ವಿಷಯಾನುಕ್ರಮಣಿಕೆ

೧. ಶ್ರೀವ್ಯಾಸಸೂಕ್ತಿ - ಶ್ರೀಮಧ್ವಸೂಕ್ತಿ ೧
೨. ಹರಿದಾಸರ ಸೂಕ್ತಿರತ್ನಗಳು ೩
೩. ಗಾಯತ್ರೀಭಾಷ್ಯರೂಪಃ ಅಸೌ-೧೨ : ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ೪
೪. ಶ್ರೀಕೃಷ್ಣನಾಮಾರ್ಥಚಂದ್ರಿಕಾ-೧೧ : ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು ೭
೫. ಶಿವಃ ಶಿವೋಽಭೂತ್ : ಶ್ರೀಶ್ರೀವಿಶ್ವಪ್ರಸನ್ನತೀರ್ಥಶ್ರೀಪಾದರು ೧೧
೬. ಸಂಪಾದಕೀಯ – ಆಧ್ಯಾತ್ಮಿಕ ಆಂದೋಲನದ ಅಗತ್ಯ ೧೨
೭. ಋಷ್ಯಾದಿಗಳ ಸ್ಮರಣೆಯ ಅನುಸಂಧಾನ: ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ ೧೭
೮. ಶ್ರೀವಿಜಯದಾಸರ ಸುಳಾದಿಯಲ್ಲಿ ವಿರಾಡ್ರೂಪವರ್ಣನೆ :
– ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೨೦
೯. ಶ್ರೀಸತ್ಯಬೋಧತೀರ್ಥರು : - ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೩೦
೧೦. ಶ್ರೀಲಕ್ಷ್ಮೀನಾರಾಯಣಾಚಾರ್ಯರ 'ದಶಾವತಾರಮಾಲಿಕಾ'
– ಡಾ || ವ್ಯಾಸನಕೆರೆ ಪ್ರಭಂಜನಾಚಾರ್ಯ ೩೫
೧೧. ನವಪ್ರಕಾಶಿತ ಮಾಧ್ವಗ್ರಂಥಗಳು ೩೯
೧೨. ಗ್ರಂಥವಿಮರ್ಶೆ ೪೦
೧೩. ಮಾಸದ ವಿಶೇಷಗಳು ೪೨

*****

## ಚಂದಾ ವಿವರ

ಆಜೀವಚಂದಾ : ರೂ ೫೦೦೦
ಪಂಚವಾರ್ಷಿಕ ಚಂದಾ : ರೂ ೫೦೦; ಬಿಡಿ ಪ್ರತಿ : ರೂ ೧೦

ವಿ.ಸೂ.:–

೧) ರೂ.೧೫,೦೦೦ಗಳನ್ನು ನೀಡಿ ಶ್ರೀವ್ಯಾಸಮಧ್ವಸಂಶೋಧನಪ್ರತಿಷ್ಠಾನದ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಮಹಾಭಾರತತಾತ್ಪರ್ಯ-ನಿರ್ಣಯ, ಹರಿಕಥಾಮೃತಸಾರ, ಸುಮಧ್ವವಿಜಯ, ಸಂಗ್ರಹರಾಮಾಯಣ ಮೊದಲಾದ ಪ್ರಕಾಶನದ ಎಲ್ಲಾ ಉಪಲಬ್ಧಗ್ರಂಥಗಳೂ ಉಚಿತ.

೨) ಅದರೊಂದಿಗೆ ೫ ವರ್ಷಗಳ ಕಾಲ ಶ್ರೀವ್ಯಾಸಮಧ್ವಮಾಸಪತ್ರಿಕೆಯನ್ನೂ ಸಹ ಉಚಿತವಾಗಿ ನೀಡಲಾಗುವುದು.

## ಹರಿದಾಸರ ಸೂಕ್ತಿರತ್ನಗಳು

(ದಾಸಸಾಹಿತ್ಯ - ವ್ಯಾಸಸಾಹಿತ್ಯದ ಕನ್ನಡ ಆವಿಷ್ಕರಣ. ಕನ್ನಡಕ್ಕೆ ವ್ಯಾಸಪೀಠದ ಭಾಗ್ಯವನ್ನು ನೀಡಿದ ಹಿರಿಮೆ ಹರಿದಾಸಸಾಹಿತ್ಯದ್ದು. ಅದರಿಂದ ಆಯ್ದ ಸೂಕ್ತಿರತ್ನಗಳನ್ನು ಪ್ರತಿತಿಂಗಳೂ ಈ ಅಂಕಣದಲ್ಲಿ ಕ್ರಮವಾಗಿ ನೀಡಲಾಗುವುದು.)

### ಶ್ರೀವ್ಯಾಸರಾಜರ ಸೂಕ್ತಿರತ್ನಗಳು

ರಾಗ : ಕೇದಾರಗೌಳ ತಾಳ: ಅಟ್ಟ

ಬಲ್ಲವಗಿಲ್ಲಿದೆ ವೈಕುಂಠ ॥ಪ॥
ಬಲ್ಲವಗೆಲ್ಲೂ ಶ್ರೀಹರಿ ಪೂಜೆ ॥ಅ.ಪ॥

ಶರೀರ ಹರಿಯ ಪಟ್ಟಣ ಹೃ-
ತ್ಸರೋಜವಾತನ ಅರಮನೆ
ಸೂರ್ಯಾದಿ ದೇವರು ಚಕ್ಷುರಾದಿಗಳಲ್ಲಿ
ದ್ವಾರಪಾಲಕರಾಗಿ ಇಪ್ಪರೆಂದು ॥ ೧ ॥

ನಡೆ ಸರ್ವಗತ ಶ್ರೀಹರಿಯ ಯಾತ್ರೆ
ನುಡಿ ಸರ್ವಶಬ್ದಾರ್ಥ ಹರಿಯ ನಾಮ
ಬಿಡದೆ ಶ್ರೀಹರಿಗೆರಗುವ ಚೇತನ
ಜಡಗಳೆಲ್ಲ ಶ್ರೀಹರಿಯ ಪ್ರತಿಮೆಯೆಂದು ॥ ೨ ॥

ಹರಿ ಚರಾಚರ ಸರ್ವ ಜಗದ್ಭರಿತ
ಮುರಹರನಿದ್ದುದೆ ವೈಕುಂಠ
ನರಹರಿಯಲಿ ನವವಿಧ ಭಕುತಿಗೆ
ಸರಿಸಮವೆಂದಿಗಿಲ್ಲವೆಂದು ॥ ೩ ॥

ನಾರಾಯಣ ಅನಿರುದ್ಧ ರೂಪಗಳಿಂದ
ಶ್ರೀರಮಣನೆ ಭೋಜ್ಯಗಳಲ್ಲಿಪ್ಪ
ಸಾರಾಂಶವನು ಪ್ರದ್ಯುಮ್ನ ಸಂಕರುಷಣ -
ಮೂರುತಿಯಿಂದ ಭುಂಜಿಪನೆಂದು ॥ ೪ ॥

ಜಾಗರಾದಿಗಳಲ್ಲಿ ವಿಶ್ವಾದಿ ಮೂರುತಿ-
ಯಾಗಿ ಶ್ರೀಕೃಷ್ಣನೆ ವಿಷಯಂಗಳ
ಭೋಗಿಪನೆಂಬ ಯೋಗಿಗೆ ವಿಹಿತ-
ಭೋಗಂಗಳೆಲ್ಲ ಯಾಗಂಗಳೆಂದು ॥ ೫ ॥

*****



# ಗಾಯತ್ರೀಭಾಷ್ಯರೂಪಃ ಅಸೌ - ೧೨

(ಅನುಗ್ರಹಲೇಖನ)

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು
ಪಲಿಮಾರು ಮಠ, ಉಡುಪಿ.

ಶೃಂಗಿಯ ಶಾಪವು ಪರೀಕ್ಷಿತ್ ರಾಜರಿಗೆ ಸಂಸಾರದ ಪಾಶವನ್ನೇ ದೂರ ಸರಿಸಿತು. ಗಂಗೆಯಲ್ಲಿ ಮಿಂದಾಗ ಬಾಹ್ಯ ಮಲದ ಜೊತೆಗೆ ಅಂತಃಕರಣದ ಮಲಾಪಕರ್ಷಣೆಯೂ ಆಯಿತು. ಮನಸ್ಸಿನ ಪಾತ್ರೆಯೂ ಶುದ್ಧವಾಯಿತು :

**ಯೇಷಾಂ ಸಂಸ್ಮರಣಾತ್ ಪುಂಸಾಂ ಸದ್ಯಃ ಶುದ್ಧ್ಯಂತಿ ವೈ ಗೃಹಾಃ ।**
**ಕಿಂ ಪುನರ್ದರ್ಶನಸ್ಪರ್ಶಪಾದಶೌಚಾಸನಾದಿಭಿಃ ॥**

ಜ್ಞಾನಿಗಳ ಸ್ಮರಣೆಯೇ ಪಾಪ-ಪರಿಮಾರ್ಜಕ, ಸದ್ಯಃ ಶುದ್ಧಿಪ್ರದ. ಸಜ್ಜನರು ತಮ್ಮ ದರ್ಶನ, ಸ್ಪರ್ಶನ, ಪಾದ ಪ್ರಕ್ಷಾಳನೆ, ಆಸನಪ್ರದಾನ ಮುಂತಾದವುಗಳಿಂದ ಶುದ್ಧಿ ಮಾಡಿಸುತ್ತಾರೆ ಅನ್ನುವುದರಲ್ಲಿ ಸಂಶಯವೇ ಇಲ್ಲ.

ಜ್ಞಾನದ ಹಾಲು ಶುದ್ಧಮಾನಸಪಾತ್ರೆಯಲ್ಲಿ ಎಂದೆಂದೂ ಪರಿಶುದ್ಧ-ಸುರಕ್ಷಿತ. ಗಂಗಾಧರನ ಅವತಾರರಾದ ಶುಕಾಚಾರ್ಯರೂ ಅದಕ್ಕೆಂದೇ ಇಲ್ಲಿಗೆ ಚಿತ್ತೈಸಿದ್ದು. ಪರೀಕ್ಷಿತ್ ರಾಜರು ಶುಕರಿಗೆ ಸರ್ವಸ್ವವನ್ನು ಸಮರ್ಪಿಸಿದರು. ಅದರ ಸಂಕೇತವೇ ನಮಸ್ಕಾರ. ಶಿರಸ್ಸಿನ ಸಮರ್ಪಣೆ.

### ಅತಃ ಪೃಚ್ಛಾಮಿ ಸಂಸಿದ್ಧಿಮ್

ಜ್ಞಾನಿಗಳ ಸಮಾಗಮವೇ ಒಂದು ಪುಣ್ಯಮಯವಾದ ಪರ್ವಕಾಲ. ಅಮೃತಮಯ ಮೇಘವಾಗಿ ವರ್ಷಣೆ ಮಾಡಬೇಕಾದ ಪುಣ್ಯಘಳಿಗೆ ಮೋಘವಾಗಬಾರದು. ನೇರವಾಗಿ ಸಿದ್ಧಿ-ಸಂಸಿದ್ಧಿಗಳನ್ನೇ ಶ್ರೀಪರೀಕ್ಷಿತರು ಪ್ರಶ್ನಿಸಿದರು. ಈ ಪ್ರಶ್ನೆಯೇ ಭಾಗವತದ ಸುಧಾಮಕ್ಕೆ ಭವ್ಯ ಭೂಮಿಕೆ. ಈ ಭದ್ರ ಬುನಾದಿಯ ಆಧಾರದಲ್ಲಿ ಈ ಸುಧಾಮದ ಸೌಧವು ಬಾನಂಗಳದಲ್ಲಿ ಕಂಗೊಳಿಸುತ್ತಿದೆ.

ಶಿಷ್ಯನಾದವ ಪ್ರಶ್ನಿಸಬೇಕಾದ್ದು ಸಹಜ ಧರ್ಮ. ಗುಮ್ಮ ಕೂತರೆ, ತುಟಿ ಬಿಚ್ಚದಿದ್ದರೆ, ಮೌನ ಮೆರೆದರೆ ಇಂಥ ಶಿಷ್ಯತ್ವವೇ ಪ್ರಶ್ನಾರ್ಹವಾಗುತ್ತದೆ. ಒಬ್ಬ ಹುಟ್ಟು ಶಿಕ್ಷಕನಾದರೇ ಮಾತ್ರ ಇಂತಹ ಪ್ರಶ್ನೆಗಳು ಬದುಕಬಲ್ಲವು. ಪ್ರೀತಿಯ ಶಿಕ್ಷಕನಿಗೆ ಪ್ರಿಯಶಿಷ್ಯನ ಪ್ರಶ್ನೆ ಅಪ್ಯಾಯಮಾನವಾಗುತ್ತದೆ. ಶಿಷ್ಯನ ಪ್ರಶ್ನೆಯು ಒಮ್ಮೊಮ್ಮೆ ಶಿಕ್ಷಕನ ಆಕ್ರೋಶಕ್ಕೆ

ಗುರಿಮಾಡುವುದೂ ಉಂಟು. ಗುರುವಿಗೆ ಶಿಷ್ಯನ ಪ್ರಶ್ನೆಯೇ ಅರ್ಥವಾಗದಿದ್ದರೆ ಗುರು ಸಿಡಿಮಿಡಿಗೊಳ್ಳುವುದೂ ಉಂಟು. ನಿಜವಾದ ಶಿಕ್ಷಕನು ಶಿಷ್ಯನ ಪ್ರಶ್ನೆಯನ್ನು ಅರಿಯಬೇಕು. ಆ ಪ್ರಶ್ನೆಗೆ ಜೀವಕಳೆ ತುಂಬಬೇಕು. ಪ್ರಶ್ನೆಗೆ ಸತ್ವ ತುಂಬಿಸಬೇಕು. ಆ ಪ್ರಶ್ನೆಯನ್ನೇ ಗಟ್ಟಿಮಾಡಿ ಸಮರ್ಪಕವಾದ ಉತ್ತರ ನೀಡುವ ಸಮರ್ಥ ಗುರು ಬೇಕು. ಪೂರ್ವಪಕ್ಷವೇ ಇಲ್ಲದಿದ್ದರೆ ಸಿದ್ಧಾಂತಕ್ಕೆಲ್ಲಿ ಅವಕಾಶ? ಇದು ಸೂತ್ರಪ್ರಸ್ಥಾನದ, ಅದರಲ್ಲೂ ಬ್ರಹ್ಮಸೂತ್ರಗಳ ಮಹತ್ವ.

ಇಷ್ಟು ಹೇಳಿದಾಗ ನಮ್ಮ ಗುರುಗಳು ಶ್ರೀಶ್ರೀವಿದ್ಯಾಮಾನ್ಯತೀರ್ಥ ಮಹಾಸ್ವಾಮಿಗಳು ನೆನಪಿಗೆ ಬರುತ್ತಾರೆ. ನಾವೆಲ್ಲಾ ಅಧ್ಯಯನ ಮಾಡುತ್ತಿದ್ದ ಕಾಲ. ನಾವೂ ಪ್ರಶ್ನೆಯನ್ನು ಕೇಳುವುದಿತ್ತು. ಪ್ರಶ್ನೆ ಕೇಳಿದಾಗ ಗುರುಗಳು ಅರೆಘಳಿಗೆ ಅಂಗೈಯ ಮೇಲೆ ಗಲ್ಲವನ್ನಿಟ್ಟು ಚಿಂತಾಕ್ರಾಂತರಾಗುತ್ತಿದ್ದರು. ಆಗ ನಮಗೆಲ್ಲಾ ಭಾರಿ ಖುಷಿ. ಗುರುಗಳಿಗೂ ಉತ್ತರಿಸಲಾಗದ ಪ್ರಶ್ನೆ ನಮ್ಮದು ಎಂದು ಬೀಗುತ್ತಿದ್ದೆವು. ನಮ್ಮ ಬುದ್ಧಿಶಕ್ತಿಯ ಬಗ್ಗೆ ನಮಗೇ ಬಿಗು ಅಭಿಮಾನ.

ಮತ್ತೆ ಗೊತ್ತಾಗುತ್ತಿತ್ತು. ಅವರು ತಲೆ ಕೆಡಿಸಿಕೊಳ್ಳುತ್ತಿದ್ದದ್ದು ಉತ್ತರಕ್ಕಲ್ಲ. ನಮ್ಮ ಪ್ರಶ್ನೆಯೇ ಅವರಿಗೆ ಅರ್ಥವಾಗುತ್ತಿರಲಿಲ್ಲ. ಯಾಕೆಂದರೆ ಪ್ರಶ್ನೆಯಲ್ಲಿ ಸ್ವಲ್ಪವೂ ತಾಕತ್ತಿರುತ್ತಿರಲಿಲ್ಲ. ದುರ್ಬಲವಾದ ಪ್ರಶ್ನೆ; ಅರ್ಥವಾದರೇ ತಾನೇ ಮತ್ತೆ ಉತ್ತರ! ಆದರೂ ಯಾವ ಪ್ರಶ್ನೆಯನ್ನು ಉಪೇಕ್ಷಿಸುತ್ತಿರಲಿಲ್ಲ. ಆ ಪ್ರಶ್ನೆಗೆ ರೆಕ್ಕೆ ಪುಕ್ಕ ಸೃಷ್ಟಿಸಿ ಪ್ರಶ್ನೆಯನ್ನು ಸಮರ್ಥಗೊಳಿಸುತ್ತಿದ್ದರು. ''ನಿಮ್ಮ ಪ್ರಶ್ನೆ ಹಾಗಲ್ಲ'' ಎಂದು ಪ್ರಶ್ನೆಯನ್ನು ನಮ್ಮ ಮುಂದಿಟ್ಟು ಪ್ರಶ್ನೆಯನ್ನು ಪ್ರಶಂಸಿಸಿ ಉತ್ತರ ನೀಡುತ್ತಿದ್ದರು. ಇದು ಗುರುಗಳಲ್ಲಿ ಗುರುತಿಸಿದ ಶಿಕ್ಷಕನ ತಾಳ್ಮೆ-ಸಹೃದಯತೆ-ಶಿಷ್ಯನಿರ್ಮಾಣಕ್ರಮಗಳು.

ಮನೋನಿಯಾಮಕರಾದ ಶ್ರೀಶುಕಾಚಾರ್ಯರ ಶಿಕ್ಷಣಕ್ರಮ ಅತ್ಯದ್ಭುತ. ''ನಾಪೃಷ್ಟಃ ಕಸ್ಯಚಿತ್ ಬ್ರೂಯಾತ್''. ಶಿಷ್ಯನ ಪ್ರಶ್ನೆ ಬಾರದಿದ್ದರೆ ಗುರುವಿನ ಉತ್ತರ ದೊರೆಯದು. ಪರೀಕ್ಷಿತರಾಜರು ಸುಂದರಪ್ರಶ್ನೆ ಕೇಳುವುದರ ಮೂಲಕ ಸಮರ್ಪಕರಾದ ಶಿಷ್ಯರೂ ಹೌದು. ಅದಕ್ಕೆ ಉತ್ತರ ನೀಡಿದ ಶ್ರೀಶುಕರ ಗುರುತ್ವವೂ ಗುರುತರವಾದುದು.

### ವರೀಯಾನ್ ಏಷ ತೇ ಪ್ರಶ್ನಃ

ಶಿಷ್ಯನು ಪ್ರಶ್ನೆ ಕೇಳಿದಾಗ ಶಿಷ್ಯನನ್ನು ಬೈಯುವ ಗುರುಗಳೇ ಜಾಸ್ತಿ. ಪ್ರಶ್ನೆಯು ಶಿಷ್ಯನ ಧಾರ್ಷ್ಟ್ಯ-ದೌಷ್ಟ್ಯ-ಹಮ್ಮುಗಳಿಗೆ ದ್ಯೋತಕವಾಗಬಾರದು. ಶಿಷ್ಯನ ಅಂತರಾಳದ ಜಿಜ್ಞಾಸೆಗೆ ಸೂಚಕವಾಗಬೇಕು. ಪ್ರಶ್ನೆ ಕೇಳಿದ ಶಿಷ್ಯನ ಬಗ್ಗೆ-ಶಿಷ್ಯ ಕೇಳಿದ ಪ್ರಶ್ನೆಯ ಬಗ್ಗೆ



ಗುರುವಾದವನು ಸಂತಸಪಡಬೇಕು. ಶಿಷ್ಯನ ಪ್ರಶ್ನೆಯನ್ನು ಪ್ರಶಂಶಿಸಲೂಬೇಕು, ಶಿಷ್ಯನನ್ನು ಹೊಗಳಬಾರದು. ಆದರೆ ಆತನ ಪ್ರಶ್ನೆಯನ್ನು ಹೊಗಳದಿರಲೂಬಾರದು.

ಅದಕ್ಕೆ ಶ್ರೀಶುಕಾಚಾರ್ಯರಿಗೆ ಈ ಸ್ಥಾನಮಾನ. ಪರೀಕ್ಷಿತ್ ರಾಜರ ಪ್ರಶ್ನೆಯನ್ನು **'ವರೀಯನ್ ಏಷ ತೇ ಪ್ರಶ್ನಃ'** ಎಂದು ಮುಕ್ತಕಂಠದಿಂದ ಶ್ರೀಶುಕರು ಗೌರವಿಸಿದ್ದಾರೆ. ವಿರಕ್ತರಿಗೆ ಹೊಗಳುವ ಅಭ್ಯಾಸವಿಲ್ಲ. ಆದರೆ ಜ್ಞಾನಕಾರ್ಯದ ಪ್ರಧಾನಾಂಗ ಇದು.

ಆದಕ್ಕೇನೇ '**ಯೋ ದೇವಾನಾಂ ನಾಮಧಾ ಏಕ ಏವ ತಂ ಸಂಪ್ರಶ್ನಂ ಭುವನಾಯಂತ್ಯನ್ಯಾ**'. ಹೀಗೆ 'ಸಂಪ್ರಶ್ನ' ಎಂದೇ ಭಗವಂತನನ್ನು ವೇದಮಾತೆ ಸ್ತುತಿಸುತ್ತಾಳೆ. ಹಾಗಾಗಿ ಪ್ರಶ್ನೆಯೇ ಸತ್ವ. ಇದೇ ಮುಂದಿನ ಉತ್ತರ ರೂಪವಾದ ಭಾಗವತಕ್ಕೆ ಪೀಠಿಕೆ.

ಇದೂ ಓಂಕಾರದ ಅರ್ಥ. ಓಂಕಾರದ ಮೂಲ ''ಅವ'' ಎನ್ನುವ ಕ್ರಿಯಾಪದ. ''ಅವ'' ಅನ್ನುವುದಕ್ಕೆ ''ಅರ್ಥಯಾಚನೆ'' ಎಂದೂ ಒಂದು ಅರ್ಥ. ಅವಿಜ್ಞಾತವಾದ ಅರ್ಥದ ಯಾಚನೆಯೇ ''ಪ್ರಶ್ನೆ'' ತಾನೇ? ಹಾಗಾಗಿ ''ಪ್ರಶ್ನೆಯೂ'' ಓಂಕಾರದ ಅರ್ಥ. ಅದಕ್ಕೇನೇ ಪ್ರಥಮಸ್ಕಂಧ ಗಾಯತ್ರಿಯ 'ಭಾಷ್ಯ'ರೂಪ.

* * * * *


## ಅಂತರ್ಜಾಲದಲ್ಲಿ ಪ್ರವಚನ ಹಾಗೂ ನೇರಪ್ರಸಾರ

**www.livepravachana.com** ಅಂತರ್ಜಾಲ ತಾಣದಲ್ಲಿ ಕಳೆದ ಒಂದು ವರ್ಷದಿಂದ ಪ್ರವಚನಗಳು ಹಾಗೂ ಪಾಠ ನೇರಪ್ರಸಾರವಾಗುತ್ತಿದ್ದು ಬಹಳಷ್ಟು ಮಾಧ್ವರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ. ಈಗ ಕಾರ್ಯಕ್ರಮದ ವಿವರವನ್ನು ಮೊಬೈಲ್ ದೂರವಾಣಿಗೆ ಉಚಿತವಾಗಿ ಕಳುಹಿಸುವ ಸೌಲಭ್ಯವನ್ನು ಪ್ರಾರಂಭಿಸಲಾಗಿದೆ. ಇದಕ್ಕಾಗಿ **ON LIVEPRAVACHANA** ಎಂದು **09870807070** ಸಂಖ್ಯೆಗೆ **sms** ಕಳುಹಿಸಬೇಕು. ಇದು ಸಂಪೂರ್ಣ ಉಚಿತವಾದ ಸೇವೆ. ಇದರ ಪ್ರಯೋಜನವನ್ನು ಜಿಜ್ಞಾಸುಗಳು ಪಡೆದುಕೊಳ್ಳಬಹುದು.

# ಶ್ರೀಕೃಷ್ಣನಾಮಾರ್ಥಚಂದ್ರಿಕಾ - ೧೧

**(ಅನುಗ್ರಹ ಲೇಖನ)**

**ಪರಮಪೂಜ್ಯ ಶ್ರೀಶ್ರೀವಿದ್ಯೇಶತೀರ್ಥ ಶ್ರೀಪಾದರು**
**ಭಂಡಾರಕೆರೆ ಮಠ**

ಅಥವಾ ಕೃಷ್ಣಾಶಬ್ದೇನ ಯಮುನಾ ಉಚ್ಯತೇ । ತಥಾ ಚ ಪ್ರಯೋಗಃ - ''ತೀರ್ತ್ವಾ ಕೃಷ್ಣಾಂ ಪ್ರಯಾತಃ'' ಇತಿ ರಾಮಚಾರಿತ್ರ್ಯಮಂಜರ್ಯಾಮ್ । ''ಕೃಷ್ಣಾಯಾಃ ಕಾಲಿಯಂ ತ್ಯಕ್ತ್ವಾ'' ಇತಿ ಚ ಮಣಿಮಂಜರ್ಯಾಮ್ ।

ತಥಾ ಚ ಶ್ರೀಃ = ಕಾಲಿಯನಾಗಂ ನಿಷ್ಕಾಸ್ಯ ನಿರ್ವಿಷೀಕರಣೇನ ಅಮೃತಜಲಸಂಪತ್, ಕೃಷ್ಣಾಯಾಂ = ಯಮುನಾಯಾಂ ಯೇನ ಸಂಪಾದಿತಾ ಸ ಚ ದೇವಕೀನಂದನಃ ಶ್ರೀಕೃಷ್ಣಃ ಇತಿ ವ್ಯಪದಿಷ್ಟಃ । ತಥಾಚೋಕ್ತಂ ಭಾಗವತೇ ದಶಮೇ -

> ತದೈವ ಸಾಽಮೃತಜಲಾ ಯಮುನಾ ನಿರ್ವಿಷಾಽಭವತ್ ।
> ಅನುಗ್ರಹಾದ್ಭಗವತಃ ಕ್ರೀಡಾಮನುಜರೂಪಿಣಃ ॥ ಇತಿ ॥

ಅಥವಾ ಹಿಂದೆ ಹೇಳಿದ ರಾಮಚಾರಿತ್ರ್ಯಮಂಜರಿ-ಮಣಿಮಂಜರಿಗಳ ಉಲ್ಲೇಖದಿಂದ 'ಕೃಷ್ಣಾ'ಶಬ್ದವು ಯಮುನೆಯನ್ನು ಹೇಳುತ್ತದೆ ಎಂದು ಸಾಬೀತಾಗಿದೆ. ಆ ಕೃಷ್ಣೆ(ಯಮುನೆ)ಯಲ್ಲಿ ನದಿದೂಷಕನಾದ ಕಾಲಿಯನಾಗನನ್ನು ಉಚ್ಚಾಟಿಸಿ, ವಿಷದಿಂದ ವಿಮುಕ್ತಿಗೊಳಿಸಿ ಆ ಯಮುನೆಗೆ ಅಮೃತಜಲಸಂಪತ್ತನ್ನು ಅನುಗ್ರಹಿಸಿದವನು ವಾಸುದೇವನು. ಆದುದರಿಂದ ಶ್ರೀಃ = ಅಮೃತಜಲಸಂಪತ್, ಕೃಷ್ಣಾಯಾಂ = ಯಮುನಾಯಾಂ ಯೇನ ಸಂಪಾದಿತಾ ಸ ಚ ದೇವಕೀನಂದನಃ ''ಶ್ರೀಕೃಷ್ಣಃ'' ಎಂಬ ವಿಗ್ರಹವನ್ನು ಅನುಸರಿಸಿದಾಗ ಈ ಅರ್ಥವು ಸಮಂಜಸವೇ ಆಗಿದೆ. ಭಗವಾನ್ ಶ್ರೀವಾಸುದೇವನ ಅನುಗ್ರಹದಿಂದ ಯಮುನೆ ವಿಷದಿಂದ ವಿಮುಕ್ತಳಾಗಿ ಅಮೃತಜಲಸಂಪತ್ತಿನಿಂದ ಶೋಭಿಸಿದಳು ಎಂಬ ಪ್ರಮೇಯವನ್ನು ಭಾಗವತದ ದಶಮಸ್ಕಂಧದ ಉಲ್ಲೇಖದಿಂದ ಸಿದ್ಧವಾಗಿದೆ -

> ತದೈವ ಸಾಽಮೃತಜಲಾ ಯಮುನಾ ನಿರ್ವಿಷಾಽಭವತ್ ।
> ಅನುಗ್ರಹಾದ್ಭಗವತಃ ಕ್ರೀಡಾಮನುಜರೂಪಿಣಃ ॥

ಅಥವಾ,



'ವ್ಯಾಸಾರ್ಜುನಾಗ್ನಿಹರಿಕೋಕಿಲಕಾಕಶೂದ್ರತಾಮಿಸ್ರಪಕ್ಷಕಲಿನೀಲಗುಣೇಷು ಕೃಷ್ಣಃ' ಇತಿ ಭಾಸ್ಕರೋಕ್ತ್ಯಾ ಕೃಷ್ಣಶಬ್ದೋಽಗ್ನಿವಾಚಕಃ ಇತಿ ಸಿದ್ಧ್ಯತಿ । ತಥಾ ಚ ಶ್ರೀಃ = ಭೋಜ್ಯಖಾಂಡವವನಸಂಪತ್, ತದ್ಭಕ್ಷಣನಿಮಿತ್ತಬಲಸಂಪತ್ ಚ ಕೃಷ್ಣೇ = ಅಗ್ನೌ, ಯೇನ = ವಾಸುದೇವೇನ ಸಂಪಾದಿತಾ ಸ ಚ ದೇವಕೀನಂದನಃ ಶ್ರೀಕೃಷ್ಣಃ ಇತಿ ನಿಗದ್ಯತೇ ।

ಹವ್ಯವಾಹನೋ ದೇವಾನಾಂ ಹವಿರ್ದಾನೇ ಪ್ರಯಾಜಾನುಯಾಜಾಖ್ಯಾಹುತಿ-ವಿಶೇಷಾನ್ ಶುಲ್ಕತ್ವೇನ ಯಯಾಚೇ । ತದಾ ದೇವಾಃ ಬಲಹ್ರಾಸಸ್ತವ ಭೂಯಾದಿತಿ ಶಪ್ತ್ವಾ ತಾನ್ ದದುಃ । ಪುನಃ ಬಲಪೂರ್ತಿಃ ಕೇನ ಸ್ಯಾತ್ ಇತಿ ಅಗ್ನಿನಾ ಪೃಷ್ಟೋ ಬ್ರಹ್ಮಾ ಖಾಂಡವವನಭಕ್ಷಣೇನ ಬಲಪೂರ್ತಿಃ ಭವಿಷ್ಯತೀತಿ ಉವಾಚ । ತತೋಽಗ್ನಿಃ ಖಾಂಡವವನಂ ಅತ್ತುಮೈಚ್ಛತ್ । ಶಕ್ರಾಧೀನಂ ತದ್ವನಂ ಅತ್ತುಂ ಸ ವಿಘ್ನಂ ಕುರ್ಯಾದಿತಿ ಹುತಭುಕ್ ಅಮನ್ಯತ । ಅತಃ ಸ್ವರೂಪತ್ವಾತ್ ಅರ್ಜುನಸ್ಯ ವಿರೋಧಂ ಶಕ್ರೋ ನ ಕುರ್ಯಾದಿತಿ ಅಭಿಪ್ರೇತ್ಯ ತದಧೀನತದ್ವನಭಕ್ಷಣಸೌಕರ್ಯಾಯ ಶಕ್ರಾವತಾರಂ ಅರ್ಜುನಂ ಯಯಾಚೇ । ಶ್ರೀಕೃಷ್ಣಪ್ರೇರಣಯಾ, ತದನುಗ್ರಹೇಣ ಚ ಅರ್ಜುನೋ ತದ್ವನಂ ಭಕ್ಷಯತುಮುದ್ಯತಸ್ಯ ಸ್ವಸ್ಯ (ಅಗ್ನೇಃ) ಶಕ್ರೇಣ ದೃಷ್ಟಿಪಾತೇನ ವಿಘ್ನೇ ಕೃತೇ ಸತಿ ಸ್ವಮೂಲರೂಪಂ ಇಂದ್ರಂ ಪ್ರತಿರುಧ್ಯ ಸ್ವಸ್ಯ ಖಾಂಡವವನಭಕ್ಷಣ-ಸೌಕರ್ಯಂ ಪಾರ್ಥೋ ವಿದಧ್ಯತ್ ಇತಿ ಬುದ್ಧ್ವಾ ಶ್ರೀಕೃಷ್ಣಮಪಿ ಯಯಾಚೇ । ತಸ್ಮಾತ್ ಶ್ರೀಃ = ಭೋಜ್ಯಖಾಂಡವವನಸಂಪತ್, ತದ್ಭಕ್ಷಣನಿಮಿತ್ತಬಲಸಂಪಚ್ಚ ಕೃಷ್ಣೇ = ಅಗ್ನೌ, ಯೇನ (ವಾಸುದೇವನ) ಸಂಪಾದಿತಾ ಸ ಚ ವಾಸುದೇವಃ ಶ್ರೀಕೃಷ್ಣಃ ಇತಿ ನಿಗದ್ಯತೇ ಇತಿಸಾಧೂಕ್ತಮ್ ।

ತಥಾ ಚೋಕ್ತಂ ಮಹಾಭಾರತತಾತ್ಪರ್ಯನಿರ್ಣಯೇ -

> ಪಾರ್ಥಃ ಕೃಷ್ಣಪ್ರೇರಣಾಚ್ಚೈವ ವಹ್ನಿಃ
> ಪಾರ್ಥಂ ಯಯಾಚೇ ಶಕ್ರವಿರೋಧಶಾಂತ್ಯೈ ।
> ನ ಹಿ ಸ್ವದತ್ತಸ್ಯ ಪುನಃ ಸ ವೈರಂ
> ಶಕ್ರಃ ಕುಯಾತ್ ಸ್ವಯಮಿಂದ್ರೋ ಹಿ ಪಾರ್ಥಃ ॥ ...
> ನ ಚಾಯುಕ್ತಃ ಕೇಶವೇನೈಷ ಶಕ್ತ
> ಇತಿ ಸ್ಮ ಕೃಷ್ಣಾದಾಪ ಭೂಯೋಽಪ್ಯನುಜ್ಞಾಮ್ ॥

- ಇತಿ ಮಹಾಭಾರತತಾತ್ಪರ್ಯನಿರ್ಣಯೇ ವಿಂಶೇಽಧ್ಯಾಯೇ ।

ಅಥವಾ,

'ವ್ಯಾಸಾರ್ಜುನಾಗ್ನಿಹರಿಕೋಕಿಲಕಾಕಶೂದ್ರತಾಮಿಸ್ರಪಕ್ಷಕಲಿನೀಲಗುಣೇಷು ಕೃಷ್ಣಃ' ಭಾಸ್ಕರವಚನದಿಂದ ಕೃಷ್ಣಶಬ್ದವು ಅಗ್ನಿವಾಚಕವೆಂದು ಸಿದ್ಧವಾಗಿದೆ.

ಹೀಗಾಗಿ ಶ್ರೀಃ = ಭೋಜ್ಯವಾದ ಖಾಂಡವವನಸಂಪತ್ತು ಹಾಗೂ ಅದರ ಭಕ್ಷಣದಿಂದ ಪ್ರಾಪ್ತವಾದ ಬಲಸಂಪತ್ ಕೂಡಾ, ಕೃಷ್ಣೇ = ಅರ್ಜುನನಲ್ಲಿ, ಯೇನ = ವಾಸುದೇವನಿಂದ ಉಂಟಾಯಿತೋ, ಸಃ = ದೇವಕೀನಂದನನು, 'ಶ್ರೀಕೃಷ್ಣಃ' ಎಂಬುದಾಗಿ ಸಾರ್ಥಕವಾಗಿ ಕೀರ್ತಿತನಾಗಿದ್ದಾನೆ.

ದೇವಹವ್ಯವಾಹನನಾದ ಅಗ್ನಿಯು ದೇವತೆಗಳಿಗೆ ಹವಿಸ್ಸನ್ನು ದಾನ ಮಾಡಿದ್ದಕ್ಕಾಗಿ ಪ್ರಯಾಜಾನುಯಾಜರೂಪವಾದ ಆಹುತಿವಿಶೇಷಗಳನ್ನು ಶುಲ್ಕರೂಪದಲ್ಲಿ ಬೇಡಿದನು. ಆಗ ದೇವತೆಗಳು ಬಲಹ್ರಾಸವಾಗಲಿ ಎಂದು ಅಗ್ನಿಯನ್ನು ಶಪಿಸಿ ಆ ಆಹುತಿಗಳನ್ನು ನೀಡಿದರು. ಚಿಂತಾಕ್ರಾಂತನಾದ ಅಗ್ನಿಯು ಕಳೆದುಹೋದ ಬಲಸಂಪತ್ತು ತನಗೆ ಯಾವುದರಿಂದ ಪುನಃ ಪ್ರಾಪ್ತವಾಗಬಲ್ಲದು? ಎಂದು ಬ್ರಹ್ಮದೇವರನ್ನು ಕೇಳಿದನು. ಖಾಂಡವವನಭಕ್ಷಣದಿಂದ ಬಲಸಂಪತ್ತು ಪ್ರಾಪ್ತವಾಗಲಿದೆ ಎಂದು ಅವರು ಹೇಳಿದರು. ಆದುದರಿಂದ ಆತನು ಖಾಂಡವವನವನ್ನು ಭಕ್ಷಿಸಲು ಇಚ್ಛಿಸಿದನು. ಆದರೆ ಇಂದ್ರಾಧೀನವಾದ ಖಾಂಡವವನವನ್ನು ಭಕ್ಷಿಸುವುದು ಸುಲಭವಲ್ಲವೆಂದು ಅಗ್ನಿಯು ಭಾವಿಸಿದನು. ಆ ವನವನ್ನು ಭಕ್ಷಿಸಲು ತಾನು ಉದ್ಯುಕ್ತನಾದರೆ ಇಂದ್ರನು ವಿಘ್ನವನ್ನುಂಟುಮಾಡಬಹುದು ಎಂಬ ಭಯ ಆತನನ್ನು ಆವರಿಸಿತ್ತು.

ಆದರೆ ಇಂದ್ರಾವತಾರನಾದ ಅರ್ಜುನನಿಂದ ಅದನ್ನು ಭೋಜ್ಯರೂಪದಲ್ಲಿ ದಾನಪಡೆದರೆ ಇಂದ್ರನು ತಾನು ವನವನ್ನು ಭಕ್ಷಣಮಾಡಲು ಉದ್ಯುಕ್ತನಾದಾಗ ವಿರೋಧಿಸಲಾರ. ಏಕೆಂದರೆ ಪ್ರತಿಗೃಹೀತೃವಿನ ಸ್ವದತ್ತಭೋಗವನ್ನು ತಾನೇ ವಿರೋಧಿಸುವುದು ಸಮಂಜಸವಲ್ಲ ತಾನೇ? ಇಂದ್ರ-ಅರ್ಜುನರಲ್ಲಿ ಅಭೇದವಿದೆ ತಾನೇ? ಈ ತೆರನಾಗಿ ಭಾವಿಸಿದ ಅಗ್ನಿಯು ಅರ್ಜುನನನ್ನು ಕುರಿತು ಖಾಂಡವವನವನ್ನು ಅನ್ನರೂಪದಲ್ಲಿ ಬೇಡಿದನು.

ಶ್ರೀಕೃಷ್ಣನ ಪ್ರೇರಣೆ ಹಾಗೂ ಅನುಗ್ರಹವಿಲ್ಲದೆ ಅರ್ಜುನನು ಇಂದ್ರನ ವಿಘ್ನವನ್ನು ನಿವಾರಿಸಿ ತನಗೆ ಖಾಂಡವವನಭಕ್ಷಣದ ಸೌಕರ್ಯವನ್ನು ಕಲ್ಪಿಸಲು ಸಮರ್ಥನಾಗಲಾರನು ಎಂದು ಭಾವಿಸಿದ ಆತನು ಶ್ರೀಕೃಷ್ಣನನ್ನೂ ಬೇಡಿದನು.

ಹೀಗಾಗಿ 'ಶ್ರೀ'ಶಬ್ದದಿಂದ ಅಭಿಪ್ರೇತವಾದ ಖಾಂಡವವನಸಂಪತ್ತು ಹಾಗೂ ಅದರ ಭಕ್ಷಣದಿಂದ ಪ್ರಾಪ್ತವಾದ ಬಲಸಂಪತ್ತು, ಕೃಷ್ಣಶಬ್ದದಿಂದ ಕೀರ್ತಿತನಾದ ಅರ್ಜುನನಲ್ಲಿ



ಉಂಟಾದದ್ದು ಶ್ರೀವಾಸುದೇವನ ಅನುಗ್ರಹದಿಂದಲೇ. ಆದುದರಿಂದ 'ಶ್ರೀಃ ಕೃಷ್ಣೇ ಯೇನ ಸಃ ಶ್ರೀಕೃಷ್ಣಃ' ಎಂಬ ವಿಗ್ರಹವನ್ನು ಅನುಸರಿಸಿ ಹಿಂದೆ ಮಾಡಿದ ಶ್ರೀಕೃಷ್ಣನಾಮದ ವ್ಯಾಖ್ಯಾನವು ಸಮಂಜಸವೇ ಆಗಿದೆ.

ಶ್ರೀಕೃಷ್ಣನಾಮದಿಂದ ವ್ಯಾಖ್ಯಾತವಾದ ಪ್ರಮೇಯವಿಶೇಷದ ಮೇಲೆ ಮಹಾಭಾರತ-ತಾತ್ಪರ್ಯನಿರ್ಣಯದ ವಚನಗಳು ಬೆಳಕನ್ನು ಚೆಲ್ಲಿವೆ :

ಪಾರ್ಥಃ ಕೃಷ್ಣಪ್ರೇರಣಾಚ್ಚೈವ ವಹ್ನಿಃ
ಪಾರ್ಥಂ ಯಯಾಚೇ ಶಕ್ರವಿರೋಧಶಾಂತ್ಯೈ ।
ನ ಹಿ ಸ್ವದತ್ತಸ್ಯ ಪುನಃ ಸ ವೈರಂ
ಶಕ್ರಃ ಕುಯಾತ್ ಸ್ವಯಮಿಂದ್ರೋ ಹಿ ಪಾರ್ಥಃ ॥ ...
ನ ಚಾಯುಕ್ತಃ ಕೇಶವೇನೈಷ ಶಕ್ತ
ಇತಿ ಸ್ಮ ಕೃಷ್ಣಾದಾಪ ಭೂಯೋಽಪ್ಯನುಜ್ಞಾಮ್ ॥

- ಇತಿ ಇಪ್ಪತ್ತನೆಯ ಅಧ್ಯಾಯದಲ್ಲಿ

*****

## ಶ್ರೀವಿಜಯದಾಸರ ಒಂದು ಅಪ್ರಕಾಶಿತಕೃತಿ

(ಶ್ರೀವಿಜಯದಾಸರ ಅಪ್ರಕಾಶಿತವಾಗಿದ್ದ ಕೃತಿಯೊಂದು ನಮ್ಮ 'ಶ್ರೀಜಯತೀರ್ಥ ಹಸ್ತಲಿಖಿತಗ್ರಂಥಾಲಯದಲ್ಲಿ ಉಪಲಬ್ಧವಿದ್ದು, ಅದನ್ನು ಇಲ್ಲಿ ಕೊಡಲಾಗಿದೆ):

ಮಾಧವ ಮಂಗಳನಾಮ ಬಾರೋ ।
ಮಾಧವಮಂಗಳನಾಮ ಬಾರೋ ಪ್ರೇಮ ದೋರೋ ॥ ಪ ॥
ಮಂಗಳನಾಮ ಕಂಗಳ ಪ್ರೇಮ ।
ಕೊಂಗಳೊಲನೂದುವ ಮಂಗಳನಾಮ ॥ ೧ ॥
ವೇಣುವನೂದುವ ಜಾಣೆಯರೆಲ್ಲ ।
ಮಾಣದೆ ಮಾಡುವ ಮಾಡಿದನಲ್ಲ ॥ ೨ ॥
ಮೂಜಗದೊಡೆಯನೆ ಗೋಪಾಲಕೃಷ್ಣನೆ ।
ವಿಜಯವಿಟ್ಠಲ ವೆಂಕಟರಮಣ ॥ ೩ ॥

# ಶಿವಃ ಶಿವೋಽಭೂತ್

**(ಅನುಗ್ರಹಲೇಖನ)**

**ಪರಮಪೂಜ್ಯ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು**
**ಕಿರಿಯಪಟ್ಟ, ಪೇಜಾವರ ಅಧೋಕ್ಷಜ ಮಠ.**

'ಶಿವ' ಅನ್ನೋದು ರುದ್ರದೇವರ ನಾಮ. 'ಶಿವ' ಅಂದರೆ 'ಮಂಗಲ' ಎಂದರ್ಥ. ಮಂಗಲಾರ್ಥದ 'ಶಿವ' ಪದ ರುದ್ರದೇವರ ಹೆಸರಾದದ್ದು ಸೋಜಿಗ.

ರುದ್ರದೇವರ ಸಂಚಾರ ಶ್ಮಶಾನದಲ್ಲಿ; ಮೈತುಂಬಾ ಬಳಿದುಕೊಂಡದ್ದು ಚಿತಾಭಸ್ಮ; ಕೈಯಲ್ಲಿ ಕಪಾಲ; ಕೊರಳಲ್ಲಿ ರುಂಡಮಾಲೆ; ದಿಗಂಬರಸ್ಥಿತಿ. ಒಂದೊಂದೂ ಅಪಾವಿತ್ರ್ಯದ ನೆಲೆ. ಅಮಾಂಗಲ್ಯದ ಸಂಕೇತ. ಇಂತಹ ರುದ್ರದೇವರ ಹೆಸರು ಮಾತ್ರ ಶಿವ - ಮಂಗಲ. ಹೆಸರಿಗೂ ಅರ್ಥಕ್ಕೂ ತಾಳಮೇಳವೇ ಇಲ್ಲದ ಸ್ಥಿತಿ. ಹಾಗಾದರೆ ಅವರು ಶಿವ ಅಲ್ಲ; ಅಶಿವ ಎಂದು ಕರೆಯೋಣವೇ?

ಇಲ್ಲ, ಸಾಧ್ಯವೇ ಇಲ್ಲ. ಅವರು ಅಶಿವ ಅಲ್ಲ; ಶಿವ. ಅಷ್ಟೇ ಅಲ್ಲ; ಅವರು ಸದಾಶಿವ. ಅದು ಹೇಗೆ? ಸಮಸ್ಯೆಗೆ ಉತ್ತರಿಸಿದ್ದು ರುದ್ರದೇವರೇ. ಶುಕಾಚಾರ್ಯರಾಗಿ; ಶ್ರೀಮದ್ಭಾಗವತದಲ್ಲಿ :

''ಯಚ್ಛೌಚನಿಃಸೃತಸರಿತ್ಪ್ರವರೋದಕೇನ
ತೀರ್ಥೇನ ಮೂರ್ಧ್ನ್ಯಧಿಧೃತೇನ ಶಿವಃಶಿವೋಽಭೂತ್''

ವಾಮನರೂಪಿಯಾಗಿ ಬಂದ ಭಗವಂತ ತ್ರಿವಿಕ್ರಮನಾಗಿ ಬೆಳೆದ. ದ್ವಿತೀಯ ಹೆಜ್ಜೆಯಿಂದ ಆಕಾಶವನ್ನೆಳೆದು ಗಂಗೆಯನ್ನು ಹಡೆದ; ಶ್ರೀಹರಿಯ ಪಾದತೊಳೆದ ಜಲ-ಗಂಗೆಯನ್ನು ರುದ್ರದೇವರು ತಮ್ಮ ಶಿರಸ್ಸಿನಲ್ಲಿ ಹೊತ್ತ ಕಾರಣ ಅಮಾಂಗಲ್ಯವೆಲ್ಲ ಕಳೆದು, ತೊಳೆದು ಶಿವ ಆದರು; ಸದಾಶಿವ ಎನಿಸಿದರು.

ರುದ್ರದೇವರ ದಾರಿಯಲ್ಲಿ ನಾವೂ ಸಾಗೋಣ. ಹರಿನಿರ್ಮಾಲ್ಯವನ್ನು ಸದಾ ಧರಿಸಿಕೊಂಡು ಪವಿತ್ರರಾಗೋಣ.

* * * * *

**ಶ್ರೀಹರಿಯು ನೀಡಿರುವ ಎರಡು ತೀರ್ಥಗಳು ಎಂದರೆ ಗಂಗೆ ಮತ್ತು ಶ್ರೀಮದ್ಭಾಗವತಾದಿ ಶಾಸ್ತ್ರಗಳು. ಗಂಗೆ ಆತನ ಪಾದದಿಂದ ಬಂದು ಪಾಪತೊಳೆಯುವ ಸಾಧನವಾದರೆ, ಶಾಸ್ತ್ರ ಆತನ ಮುಖದಿಂದ ಬಂದು ಮೋಕ್ಷ ನೀಡುವ ಜ್ಞಾನಕ್ಕೆ ಕಾರಣವಾಗುವ ದಿವ್ಯಸಾಧನ. ಈ ಎರಡು ಗಂಗೆಗಳ ಅವಗಾಹನ ಮಾಡಿದಾಗಲೇ ಸಂಪೂರ್ಣ ಉದ್ಧಾರ ಸಾಧ್ಯ.**



**ಸಂಪಾದಕೀಯ-**

## ಆಧ್ಯಾತ್ಮಿಕ ಆಂದೋಲನದ ಅಗತ್ಯ

ತತ್ವಪ್ರಸಾರಕಾರ್ಯ ಜನತೆಯ ಐಹಿಕ ಪಾರತ್ರಿಕ ಜೀವನವನ್ನು ಹಸನಾಗಿಸುವ ಅತ್ಯಂತ ಪ್ರಮುಖಕಾರ್ಯ. ಗಾಳಿ ಬೆಳಕು ಅನ್ನ ನೀರುಗಳಿಲ್ಲದ ಜೀವನದಂತೆ ತತ್ವಚಿಂತನೆಯಿಲ್ಲದ ಜೀವನವೂ ನಿರರ್ಥಕ. ಆದರೆ ಅನ್ನ ನೀರುಗಳ ಮಹತ್ವದಂತೆ ಅಧ್ಯಾತ್ಮದ ಮಹತ್ವ ಜನತೆಗೆ ಸುಲಭವಾಗಿ ತಿಳಿಯಲಾರದು. ಎಂಟುನೂರು ವರ್ಷಗಳ ಹಿಂದೆ ತತ್ವಜ್ಞಾನದ ಸ್ವರೂಪವೇ ಮಸುಕಾಗಿ ಜನ ಆಧ್ಯಾತ್ಮದ ಹಸಿವಿನಿಂದ ಕಂಗೆಟ್ಟಿದ್ದರು. ಶ್ರೀಮನ್ಮಧ್ವಾಚಾರ್ಯರ ಅವತಾರದಿಂದಾಗಿ ಆ ಕೊರತೆ ನೀಗಿ ಕಲಿಯುಗದಲ್ಲೂ ಪೂರ್ಣಪ್ರಮಾಣದ ತತ್ವಜ್ಞಾನವನ್ನು ಆಸಕ್ತಜನ ಪಡೆಯು-ವಂತಾಯಿತು. ಅನಂತರ ಕಾಲದಲ್ಲಿ ಪ್ರಾಚೀನಟೀಕೆಗಳು ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಿಂದಲೂ, ಟೀಕೆಗಳು ಶ್ರೀಜಯತೀರ್ಥರಿಂದಲೂ ರಚಿತವಾದವು. ಮುಂದೆ ಶ್ರೀವ್ಯಾಸರಾಜರ ವ್ಯಾಸತ್ರಯಗಳು, ಶ್ರೀವಾದಿರಾಜರ ಯುಕ್ತಿಮಲ್ಲಿಕೆ, ಶ್ರೀರಘೂತ್ತಮರ ಭಾವಬೋಧಗಳು, ಶ್ರೀರಾಘವೇಂದ್ರರ ಪರಿಮಳ ಭಾವದೀಪಗಳು ಮೊದಲಾದ ಅತ್ಯಮೂಲ್ಯ ಕೃತಿಗಳು ರಚಿತವಾಗಿ ಸಿದ್ಧಾಂತದ ಅಧ್ಯಯನ ಮಾಡುವವರಿಗೆ ಸುವರ್ಣಯುಗದ ವಾತಾವರಣ ನಿರ್ಮಾಣವಾಯಿತು. ಕಾಲದ ಅಗತ್ಯವನ್ನು ಮನಗಂಡು ಶ್ರೀಹರಿದಾಸರು ಮಾಡಿದ ತಾತ್ವಿಕ ಆಂದೋಲನ ಪಾಮರರಲ್ಲೂ ತತ್ವಜ್ಞಾನದ ಹಸಿವನ್ನು ಹೆಚ್ಚಿಸಿತು. ಹೀಗೆ ಕಾಲಕಾಲಕ್ಕೆ ಸಿದ್ಧಾಂತಪ್ರಸಾರ ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ಸಾಗಿ ಸಾತ್ವಿಕಜನತೆ ನೆಮ್ಮದಿಯ ಅಧ್ಯಾತ್ಮಜೀವನದಲ್ಲಿ ತೊಡಗಲು ಶಕ್ಯವಾಯಿತು. ಕಾಲದ ಅಗತ್ಯವನ್ನು ಗಮನಿಸಿ ತಾತ್ತ್ವಿಕಜಾಗೃತಿಯ ಬಗ್ಗೆ ಈ ಲೋಕೋತ್ತರ ಮಹನೀಯರು ಮಾಡಿದ ಕಾರ್ಯಗಳು ಅತ್ಯದ್ಭುತವಾದವುಗಳು.

ವಿದೇಶೀಯರ, ವಿಶೇಷವಾಗಿ ಬ್ರಿಟೀಷರ ಪ್ರವೇಶದಿಂದ ನಿಧಾನವಾಗಿ ಮತಕ್ಕಿಂತ ಹೆಚ್ಚಾಗಿ ಭಾರತೀಯ ಸಂಸ್ಕೃತಿಯ ಮೇಲೆ ಹೆಚ್ಚಿನ ಆಘಾತ ಉಂಟಾಯಿತು. ಲೌಕಿಕದ ಆಕರ್ಷಣೆ ಬೆಳೆಯುತ್ತಾ ಬಂದಿತು. ಅದಕ್ಕೆ ಪೋಷಕವಾಗಿ ವೈಜ್ಞಾನಿಕ ಆವಿಷ್ಕಾರಗಳು ಭೋಗಜೀವನಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ಒದಗಿಸತೊಡಗಿದವು. ಪರದ ಚಿಂತೆ ದೂರವಾಗಿ ಭೌತಿಕಸುಖದ ಲಾಲಸೆ ಜನಗಳಲ್ಲಿ ಬೆಳೆದು ಆಧ್ಯಾತ್ಮಿಕಚಿಂತನೆ ದೂರಾಗುತ್ತಾ ಬಂದಿತು. ಆ ಸಮಯದಲ್ಲಿ ಸಮರ್ಥವಾಗಿ ಪರಿಸ್ಥಿತಿಯನ್ನು ಎದುರಿಸಿ ಮತ್ತೊಮ್ಮೆ ತಾತ್ವಿಕ ಜಾಗೃತಿಯತ್ತ ಸಮಾಜವನ್ನು ಕರೆದೊಯ್ದ ಶ್ರೇಯಸ್ಸು ಶ್ರೀಸತ್ಯಧ್ಯಾನತೀರ್ಥರಂತಹ ಪ್ರಾತಃಸ್ಮರಣೀಯರಿಂದಾಯಿತು. ಅವರಿಂದ ವಿದ್ವತ್ತಿನ ಪೋಷಣೆ ಪ್ರಸಾರಗಳು ಅಗಾಧ ಪ್ರಮಾಣದಲ್ಲಿ ನಡೆಯಿತು. ಸಾಮಾನ್ಯಜನತೆಯಲ್ಲಿ ಆಧ್ಯಾತ್ಮದ ಬಗ್ಗೆ ಆಸ್ಥೆ ಮೂಡಿಸಿದ

ಶ್ರೇಯಸ್ಸು ಶ್ರೀಕುಂದಾಪುರ ವ್ಯಾಸರಾಜಮಠದ ಶ್ರೀಲಕ್ಷ್ಮೀಶತೀರ್ಥಶ್ರೀಪಾದರದು. ಆ ದಿನಗಳಲ್ಲಿ ಪ್ರಥಮಬಾರಿಗೆಂಬಂತೆ ಒಬ್ಬ ಮಠಾಧೀಶರು ವಿಶಾಲವೇದಿಕೆಗಳಲ್ಲಿ ಅಧ್ಯಾತ್ಮದ ಬಗ್ಗೆ ವಿಶೇಷವಾಗಿ ಮಧ್ವಸಿದ್ಧಾಂತದ ಬಗ್ಗೆ ಪ್ರಸಾರದಲ್ಲಿ ತೊಡಗಿದ್ದು ಅನೇಕ ಲೌಕಿಕಪ್ರತಿಷ್ಠಿತರು ಅಧ್ಯಾತ್ಮದತ್ತ ಒಲವು ತೋರಲು ಕಾರಣವಾಯಿತು. ಶ್ರೀಸತ್ಯಧ್ಯಾನತೀರ್ಥರ ಹಾಗೂ ಶ್ರೀಲಕ್ಷ್ಮೀಶತೀರ್ಥರ ಕಾರ್ಯಗಳೆರಡನ್ನೂ ಮೇಳೈಸಿಕೊಂಡ ಹಿರಿಮೆ ಶ್ರೀವಿದ್ಯಾಮಾನ್ಯತೀರ್ಥರದಾಯಿತು. ಅವರ ಮಾರ್ಗದರ್ಶನದಲ್ಲಿಯೇ ಸಾಗಿದ ಶ್ರೀವಿಶ್ವೇಶತೀರ್ಥರ ಕಾರ್ಯವ್ಯಾಪ್ತಿ ಇನ್ನೂ ವಿಶೇಷವಾಗಿ ಮಾಧ್ವೇತರರೂ ಬ್ರಾಹ್ಮಣೇತರರೂ ಸಹ ಮಧ್ವಸಿದ್ಧಾಂತದ ಹಿರಿಮೆಯನ್ನು ಇತ್ತೀಚಿನ ದಿನಗಳಲ್ಲಿ ಗುರುತಿಸಲು ಸಾಧ್ಯವಾಯಿತು. ಈ ಮಧ್ಯೆ ಇತರ ವಿದ್ಯಾಪೀಠಗಳಿಂದಲೂ ಪಂಡಿತರ ನಿರ್ಮಾಣಕಾರ್ಯ ಭರದಿಂದ ಸಾಗಿ ಈಗ ವಿದ್ವಾಂಸರ ಕೊರತೆ ಅಷ್ಟಾಗಿ ಇಲ್ಲ ಎಂಬ ವಾತಾವರಣ ಮೂಡಿದೆ. ಆದರೆ ಇದೇ ಪ್ರಮಾಣದಲ್ಲಿ ಶ್ರೋತೃಗಳ ಸಂಖ್ಯೆ ಬೆಳೆಯುತ್ತಿಲ್ಲ ಎಂಬುದು ಆತಂಕದ ವಿಷಯ.

ಇದರೊಂದಿಗೆ ಕಂಪ್ಯೂಟರ್ ಕ್ರಾಂತಿಯಿಂದಾಗಿ ಜಾಗತೀಕರಣ ನಡೆದು ತತ್ವಪ್ರಸಾರ ಕಾರ್ಯಕ್ಕೆ ಹೊಸ ಸವಾಲು ಉಂಟಾಗಿದೆ. ಜನಗಳಿಗೆ ಅಧ್ಯಾತ್ಮವಿರಲಿ, ತೀರಾ ಸಾಮಾನ್ಯ ಲೌಕಿಕಮೌಲ್ಯಗಳಲ್ಲೂ ಸಹ ಆಸಕ್ತಿ ದಿನೇ ದಿನೇ ಕುಂದುತ್ತಿದೆ. ಅದರೊಂದಿಗೆ ಐಷಾರಾಮಿ ಜೀವನಶೈಲಿಗೆ ಪೂರಕವಾಗುವ ಅಪಾರಪ್ರಮಾಣದ ಸಂಬಳ-ಸವಲತ್ತುಗಳು ಸಹಜವಾಗಿಯೇ ಅವರನ್ನು ಮುಕ್ತಸಮಾಜದತ್ತ ಸೆಳೆದೊಯ್ಯುತ್ತದೆ. ಕೆಲಸದ ಸ್ಥಳದಲ್ಲಿನ ವಾತಾವರಣವೂ ಸ್ವೇಚ್ಛಾಚಾರಕ್ಕೆ ಇಂಬುಕೊಡುವಂತಹವುದೇ ಆಗಿರುವುದು ಮತ್ತೊಂದು ದುರಂತ. ಸತ್ಯ, ಧರ್ಮ ಮೊದಲಾದ ಇತರ ಮೌಲ್ಯಗಳಿರಲಿ, ಚಾರಿತ್ರ್ಯಶುದ್ಧಿಯಂತಹ ಮೂಲಭೂತಮೌಲ್ಯವೂ ಅತ್ಯಂತ ಆತಂಕಕಾರಿಯಾದ ರೀತಿಯಲ್ಲಿ ಕುಸಿಯುತ್ತಿದೆ. ಹಿಂದೆ ಅಗತ್ಯಕ್ಕಾಗಿ ಅನಿವಾರ್ಯ ಎಂಬಂತೆ ಇರುತ್ತಿದ್ದ ಹೋಟೆಲ್ ಮೊದಲಾದವುಗಳ ಭೋಜನ ಇಂದು ಇಂಥವರಿಗೆ ದಿನನಿತ್ಯದ ಅಗತ್ಯವೆನ್ನಿಸಿಬಿಟ್ಟಿದೆ. ಬೆಳಿಗ್ಗೆ ಆರು ಗಂಟೆಗೆ ಮನೆಬಿಟ್ಟು ರಾತ್ರಿ ಹನ್ನೆರಡರ ವೇಳೆಗೆ ಮನೆ ತಲುಪುವಂತಹ ಐಟಿ-ಬಿಟಿ ಉದ್ಯೋಗಗಳು ಮನೆಯಲ್ಲಿ ಊಟ-ತಿಂಡಿ ಮೊದಲಾದ ಎಲ್ಲ ಅವಕಾಶವನ್ನೂ ತಪ್ಪಿಸಿವೆ. ಅವರು ಹೊರಗಡೆ ತಿನ್ನುವ ಆಹಾರವು ಹೆಚ್ಚಿನ ಸಮಯದಲ್ಲಿ ಶಾಕಾಹಾರದ ಮಿತಿಯನ್ನು ಮೀರಿರುವುದು ಸಣ್ಣಸಂಗತಿಯೇನಲ್ಲ. ಇನ್ನು ಕುಡಿತ ಮೊದಲಾದ ದುರಭ್ಯಾಸಗಳಂತೂ ಸದಭ್ಯಾಸವೆನ್ನುವಷ್ಟರ ಮಟ್ಟಿಗೆ ಸಾಮಾನ್ಯವೆನ್ನಿಸುತ್ತಿವೆ.

ಇನ್ನು ಮಡಿಮೈಲಿಗೆಗಳ ವಿಚಾರ. ಅದಂತೂ ಇಲ್ಲವೇ ಇಲ್ಲ ಎನ್ನುವಷ್ಟು ಕುಸಿದಿದೆ. ಮನೆಗಳಲ್ಲಿರಲಿ; ಮಠಮಾನ್ಯಗಳಲ್ಲೂ ಇದರ ಸ್ಥಿತಿ ತೃಪ್ತಿಕರವಾಗೇನೂ ಇಲ್ಲ. ಅಲ್ಲಿ



ಹೆಚ್ಚಿನ ಕಾರ್ಯಕರ್ತರಿಗೆ ಈ ಬಗ್ಗೆ ತಿಳುವಳಿಕೆಯಾಗಲೀ, ಒಲವಾಗಲೀ ಇರುವುದೇ ಇಲ್ಲ. ಎಷ್ಟೋ ಮಠಗಳಲ್ಲಿ ಟೊಮೆಟೋ, ಕೋಸು ಮೊದಲಾದವುಗಳ ಬಳಕೆ ಅಪರೂಪವೇನಲ್ಲ.

ಇನ್ನು ವಿವಾಹಗಳ ಬಗ್ಗೆಯಂತೂ ಕೇಳುವಂತೆಯೇ ಇಲ್ಲ. ವಿವಾಹದ ಪಾವಿತ್ರ್ಯದ ಅರಿವು ಜನತೆಗೂ ಇಲ್ಲ; ಅದನ್ನು ತಿಳಿಸಿಕೊಡುವ ವ್ಯವಸ್ಥೆಯಂತೂ ಮೊದಲೇ ಇಲ್ಲ. ಸಹೋದ್ಯೋಗಿಗಳನ್ನೇ ಮೆಚ್ಚಿ ಮದುವೆಯಾಗುವುದು ಸಾಮಾನ್ಯವಾಗಿದೆ. ಜಾತಿಪಂಥಗಳ ಯೋಚನೆಯೂ ಬಹುತೇಕ ಸಂದರ್ಭಗಳಲ್ಲಿ ಇರುವುದೇ ಇಲ್ಲ. ಇಂತಹ ಹೆಚ್ಚಿನ ವಿವಾಹಗಳು ಬಹುಕಾಲ ಬಾಳುವುದೂ ಇಲ್ಲ. ಅದರಿಂದಾಗಿ ವಿವಾಹವಿಚ್ಛೇದನ, ಮರುಮದುವೆಗಳು ದಿನೇ ದಿನೇ ಹೆಚ್ಚುತ್ತಿವೆ. ಇನ್ನು ಸಂಪ್ರದಾಯಸ್ಥರ ಬಗ್ಗೆ ಹೇಳುವುದಾದರೆ ಅಂತಹವರಿಗೆ ಮೊದಲನೆದಾಗಿ ಕನ್ಯೆಯರ ಅಭಾವ. ಎರಡನೆಯದಾಗಿ ಸಂಪ್ರದಾಯದ ಕಟ್ಟುಪಾಡುಗಳ ಬಗ್ಗೆ ಅವರ ಪ್ರತಿಗಾಮಿ ದೃಷ್ಟಿಕೋನ. ಟೀವಿಯ ಧಾರಾವಾಹಿಗಳು, ವಿಕೃತಜಾಹೀರಾತುಗಳು ಬದುಕಿನ ಪಾವಿತ್ರ್ಯಕ್ಕೆ ಉಂಟುಮಾಡಿರುವ ಆಘಾತ ಈ ದೃಷ್ಟಿಯಲ್ಲಿ ಊಹಾತೀತವಾದುದು. ನಗರ ಮೊದಲಾದವುಗಳಿಗಷ್ಟೇ ಸೀಮಿತವಾಗಿದ್ದ ಐಷಾರಾಮಿ ಬದುಕಿನ ಹುಚ್ಚು ಈ ಮಾಧ್ಯಮಗಳಿಂದಾಗಿ ಹಳ್ಳಿಹಳ್ಳಿಗೂ, ಮನೆಮನೆಗೂ ವ್ಯಾಪಿಸಿದೆ. ಇವುಗಳಿಂದಾಗಿ ಸಂಪ್ರದಾಯಬದ್ಧವಾದ ಶುಭವಿವಾಹಗಳು ಗಮನಾರ್ಹಸಂಖ್ಯೆಯಲ್ಲಿ ಕಡಿಮೆಯಾಗುತ್ತಿವೆ. ವಿವಾಹದ ಸಾಂಸ್ಕೃತಿಕ, ಆಧ್ಯಾತ್ಮಿಕ ಮಹತ್ತ್ವದ ಪರಿಜ್ಞಾನ ಲುಪ್ತವಾಗಿ ಅದು ಕೇವಲ ಕೆಲವು ಕಾಲದವರೆಗಿನ ಒಡನಾಟ ಎಂಬ ಹಂತಕ್ಕೆ ಬಂದು ಮುಟ್ಟಿದೆ. ಅನೇಕ ಸಂಪ್ರದಾಯಸ್ಥರ ಮನೆಯಲ್ಲಿ ನಡೆಯುವ ಹೆಚ್ಚಿನ ವಿವಾಹಗಳು ಕೆಲವೇ ತಿಂಗಳುಗಳಲ್ಲಿ ವಿಚ್ಛೇದನದ ಹಂತ ಮುಟ್ಟುತ್ತಿರುವುದು ಜನರಿಗೆ ತಿಳಿಯದ್ದೇನಲ್ಲ. ತೀರ ಕ್ಷುಲ್ಲಕಕಾರಣಕ್ಕೆ ವಿಚ್ಛೇದನಗಳು ನಡೆಯುತ್ತಿರುವುದು ನಿಶ್ಚಿತವಾಗಿಯೂ ಶುಭಸೂಚನೆಯೇನಲ್ಲ. ಇದರೊಂದಿಗೆ ಸಗೋತ್ರವಿವಾಹ, ಜಾತ್ಯಂತರವಿವಾಹಗಳು ಅಪಾರಸಂಖ್ಯೆಯಲ್ಲಿ ನಡೆಯತೊಡಗಿವೆ. ಹಿಂದೆ ಅಪರೂಪಕ್ಕೆ ಎಂಬಂತೆ ನಡೆಯುತ್ತಿದ್ದ ಇವು ಇಂದು ತೀರ ಸಾಮಾನ್ಯವೆನ್ನಿಸುವ ಮಟ್ಟವನ್ನು ತಲುಪಿವೆ. ಹರಿಗುರುಭಕ್ತಿ ಮೊದಲಾದ ಮೂಲಮೌಲ್ಯಗಳನ್ನು ಉಳಿಸಿಕೊಳ್ಳುವ ಯೋಚನೆಯ ಮದುವೆಗಳಂತೂ ಅತಿವಿರಳ ಎನ್ನಿಸುತ್ತಿವೆ. ಇದಕ್ಕೆಲ್ಲ ಅಪವಾದವಿರುವುದು ನಿಜ. ಆದರೆ ಅಷ್ಟು ಮಾತ್ರದಿಂದ ಧರ್ಮ ಉಳಿಯಲಾರದಲ್ಲವೇ? ಹೀಗೆ ಸಾಮಾನ್ಯಮೌಲ್ಯಗಳೇ ಕುಸಿಯುತ್ತಿರುವಾಗ ವ್ರತ, ಉಪವಾಸಗಳಂತಹ ಕಠಿಣಸಾಧನೆಗಳ ಬಗ್ಗೆಯಂತೂ ಊಹಿಸುವಂತೆಯೇ ಇಲ್ಲ. ಏಕಾದಶಿಯ ಬಗ್ಗೆ ಗೊಂದಲ, ಮತೀಯಕಲಹಗಳು, ಮತಾಂತರ ಹಾಗೂ ಅದರ ವಿಕೃತರೂಪವಾದ ಇತ್ತೀಚಿನ 'ಲವ್ ಜಿಹಾದ್'

ಮೊದಲಾದವುಗಳು ಸಮಸ್ಯೆಯ ತೀವ್ರತೆಯನ್ನು ಹೆಚ್ಚಿಸಿ ಸಮಾಜವನ್ನು ಪ್ರಪಾತಕ್ಕೆ ತಳ್ಳುತ್ತಿವೆ. ಇದಕ್ಕೆ ವಿಶೇಷವಾಗಿ ಬಲಿಯಾಗುತ್ತಿರುವವರು ಬ್ರಾಹ್ಮಣವರ್ಗ, ಅದರಲ್ಲೂ ಮಹಿಳಾವರ್ಗ ಎಂಬುದು ಗುಟ್ಟಿನ ಸಂಗತಿಯೇನಲ್ಲ.

ಇಷ್ಟಕ್ಕೆಲ್ಲ ಮುಖ್ಯಕಾರಣ ಇಂದಿನ ದಿನಗಳಲ್ಲಿ ಎಲ್ಲ ಹಂತಗಳಲ್ಲೂ ಸಾಂಸ್ಕೃತಿಕಮೌಲ್ಯದ ಮಹತ್ತ್ವ ಕುಸಿದಿರುವುದು. ಆಧ್ಯಾತ್ಮಿಕಮೌಲ್ಯದ ಚಿಂತನೆಯಂತೂ ಬ್ರಾಹ್ಮಣರಲ್ಲಿ ವಿಶೇಷವಾಗಿ ವೈಷ್ಣವರಲ್ಲಿ ದಿನೇದಿನೇ ಸಂಪೂರ್ಣವಾಗಿ ಇಲ್ಲವಾಗಿರುವುದು. ಅದರ ಬಗ್ಗೆ ಹೆಚ್ಚಿನ ಯೋಚನೆ ಮಾಡುತ್ತಿರುವುದು ಇತರ ಜನರೇ ಹೊರತು ನಮ್ಮ ಜನರಲ್ಲ. ಟೀವಿಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಉದ್ದೇಶದ ಎಲ್ಲ ಚಾನೆಲ್‌ಗಳು ಮಾಧ್ವೇತರರವೇ ಆಗಿವೆ. ಮಾಧ್ವಮಠಮಾನ್ಯಗಳಾಗಲೀ, ಸಂಘ-ಸಂಸ್ಥೆಗಳಾಗಲೀ ಕಿರಿಯ ವಯಸ್ಸಿನವರಲ್ಲಿ ಶಾಸ್ತ್ರೀಯಮೌಲ್ಯಗಳ ಅರಿವನ್ನು ಮಾಡಿಕೊಡುವ ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿಲ್ಲ ಎಂಬುದು ಸಣ್ಣಲೋಪವೇನಲ್ಲ. ಅಲ್ಲಲ್ಲಿ ಆಗೊಮ್ಮೆ ಈಗೊಮ್ಮೆ ನಡೆಯುವ ಶಿಬಿರಗಳಿಂದ ಸಾಮಾಜಿಕ ಕ್ರಾಂತಿಯನ್ನು ನಿರೀಕ್ಷಿಸಲಾಗದು. ಸಮರೋಪಾದಿಯಲ್ಲಿ ಮೌಲ್ಯಸಂರಕ್ಷಣೆಯ ಆಂದೋಲನ ನಡೆಯದಿದ್ದಲ್ಲಿ ಕೆಲವೇ ವರ್ಷಗಳಲ್ಲಿ ಆಧ್ಯಾತ್ಮದಿಂದಿರಲಿ, ಸಂಸ್ಕೃತಿಯಿಂದಲೂ ಸಹ ಇಂದಿನ ಜನಾಂಗ ಸಂಪೂರ್ಣ ದೂರವಾಗುವುದರಲ್ಲಿ ಯಾವ ಅಚ್ಚರಿಯೂ ಕಂಡುಬರದು. ಇಂದಿನ ಸಭೆ-ಸಮಾರಂಭಗಳಲ್ಲಿ ಈಗಾಗಲೇ ತಿಳಿಸಿರುವಂತೆ ಸಿಂಹಪಾಲಿನ ಶ್ರೋತೃಗಳು ನಿವೃತ್ತ ವರ್ಗದವರು; ವೃದ್ಧಾಪ್ಯದಲ್ಲಿ ಕಾಲಿಟ್ಟವರು. ಇತರರು ಮಠಮಾನ್ಯಗಳಿಗೆ ಹೆಚ್ಚಾಗಿ ಧಾವಿಸುವುದು ಉಳಿತಾಯ, ಅನುಕೂಲತೆ ಮೊದಲಾದ ಕಾರಣಗಳಿಂದ ಕೆಲವು ಉತ್ಸವಗಳಿಗಾಗಿ, ಶ್ರಾದ್ಧಪಕ್ಷಗಳಿಗಾಗಿ ಮಾತ್ರ. ಧರ್ಮವನ್ನು ತಿಳಿಯಬೇಕಾದ, ಅನುಸರಿಸಬೇಕಾದ, ಬೆಳೆಸಬೇಕಾದ ಜನರನ್ನು ಆಧ್ಯಾತ್ಮದತ್ತ ಆಕರ್ಷಿಸುವ ವಿನೂತನ ಯೋಜನೆಗಳನ್ನು ತ್ವರೆಯಿಂದ ರೂಪಿಸಿಕೊಳ್ಳುವ ಅಗತ್ಯವನ್ನು ಸಂಬಂಧಿಸಿದವರು ಗಮನಿಸಬೇಕು.

ಬಾಲ್ಯದಿಂದ ಯಾವುದೇ ಹಂತದಲ್ಲೂ ಬ್ರಾಹ್ಮಣ್ಯ, ಆಸ್ತಿಕತೆ, ಆಧ್ಯಾತ್ಮ ಮೊದಲಾದವುಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸುವಂತಹ ವಾತಾವರಣ ಇಂದಿನ ದಿನಗಳಲ್ಲಿ ಸಂಪೂರ್ಣ ಲುಪ್ತವಾಗಿರುವುದೇ ಇದಕ್ಕೆಲ್ಲ ಮುಖ್ಯಕಾರಣ. ಅದರೊಂದಿಗೆ ಇದಕ್ಕೆ ಪ್ರತಿಗಾಮಿಯಾದ ವಿಚಾರಗಳನ್ನು ಎಲ್ಲ ಮಾಧ್ಯಮಗಳು ಪ್ರಧಾನಸಾಧನೆ ಎಂಬಂತೆ ಬಿಂಬಿಸುತ್ತಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತಿದೆ. ಇದಕ್ಕೆ ಸ್ವಯಂಘೋಷಿತ ವಿಚಾರವಾದಿಗಳ ಕುತರ್ಕಗಳು ಜೊತೆಯಾಗುವುದು ಮತ್ತೊಂದು ಅನರ್ಥ. ಮಠಮಾನ್ಯಗಳು ಅಗಾಧಸಂಖ್ಯೆಯಲ್ಲಿ ಇದ್ದರೂ ಅವುಗಳಲ್ಲಿ ಮೌಲ್ಯಗಳ ಬಗ್ಗೆ ಚಿಂತನೆ ಮೂಡಿಸುವ ಜ್ಞಾನಕಾರ್ಯಗಳು ಇರುವುದೇ ಇಲ್ಲ. ಇರುವ



ಕೆಲವೆಡೆಗಳಲ್ಲಿ ಅದೊಂದು ಅನಪೇಕ್ಷಿತವಾದ ಹೆಚ್ಚುವರಿಕಾರ್ಯ ಎಂಬ ಔದಾಸೀನ್ಯಭಾವವೇ ಸಾಮಾನ್ಯವಾಗಿ ಕಂಡುಬರುತ್ತದೆ. ಹಿಂದೆ ಅನೇಕ ಬಾರಿ ತಿಳಿಸಿರುವಂತೆ ಇಂದಿನ ಬಹುತೇಕ ಮಾಧ್ವಸಮಾರಂಭಗಳು ಕೇವಲ ಔಪಚಾರಿಕ ಎನ್ನಿಸಿವೆ.

ಪರಿಸ್ಥಿತಿ ಹೀಗೆಯೇ ಮುಂದುವರಿದಲ್ಲಿ ಮನೆಗಳಿಗಿರಲಿ, ಮಠವನ್ನು ನಿರ್ವಹಿಸಲು ಸನ್ಯಾಸದೀಕ್ಷೆ ಪಡೆಯುವ ಅರ್ಹವ್ಯಕ್ತಿಗಳೂ ಸಹ ದುರ್ಲಭವಾಗುವುದು ಅಸಂಭಾವ್ಯವೇನಲ್ಲ. ಈ ಹಿನ್ನೆಲೆಯಲ್ಲಿ ಸಮಾಜದ ಅಶೇಷವೈದಿಕ ಗಣ್ಯವ್ಯಕ್ತಿಗಳೆಲ್ಲ ಮಠಾಧೀಶರ ನೇತೃತ್ವದಲ್ಲಿ ಉನ್ನತಮಟ್ಟದ ಚಿಂತನೆಯಲ್ಲಿ ತೊಡಗುವುದು ಇಂದಿನ ತುರ್ತು ಅಗತ್ಯ.

*****

## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

### ನಮ್ಮ ಪ್ರತಿಷ್ಠಾನದಿಂದ ಪ್ರಕಾಶನಗೊಳ್ಳಲಿರುವ ಕೆಲವು ಕೃತಿಗಳು:

೧) **ಯತಿಧರ್ಮಪ್ರದೀಪ**
(ಅನೇಕ ಆಕರಗ್ರಂಥಗಳಿಂದ ಸನ್ನ್ಯಾಸದ ವಿಧಿವಿಧಾನ, ಯತಿಗಳ ನಿತ್ಯಾಹ್ನಿಕ, ವಿಶೇಷಕರ್ತವ್ಯ, ಚಾತುರ್ಮಾಸ್ಯವಿಧಿ ಮೊದಲಾದ ವಿವರಗಳ ಸಂಕಲನ)

೨) **ಸಂಗ್ರಹರಾಮಾಯಣ**
(ಶ್ರೀನಾರಾಯಣಪಂಡಿತರ ಸಮಗ್ರಕೃತಿ - ಸಂಸ್ಕೃತ ಮೂಲ ಹಾಗೂ ವಿವರಣಾತ್ಮಕ ಟಿಪ್ಪಣಿಗಳೊಂದಿಗೆ)

೩) **ಬಳಿತ್ಥಾಸೂಕ್ತ**
(ಶ್ರೀರಾಮ, ಕೃಷ್ಣ, ವೇದವ್ಯಾಸಪರ ಹಾಗೂ ಹನುಮದ್ಭೀಮ ಮಧ್ವಪರವಾದ ವಿಶೇಷಾರ್ಥಗಳುಳ್ಳ ಕನ್ನಡಾನುವಾದ ಸಮೇತ- ಚತುರ್ಥಾವೃತ್ತಿ)

೪) **ಮಧ್ವಭಾರತ**
(ಸಮಗ್ರ ಮಹಾಭಾರತತಾತ್ಪರ್ಯನಿರ್ಣಯದ ಕನ್ನಡ ಸಾರ)

೫) **ಪಾಜಕದ ಗಂಟೆ**
(ಶ್ರೀ ಸು.ರಂ.ಎಕ್ಕುಂಡಿ ಅವರ ಕೃತಿ)

*****

**ಮಧ್ವಶಾಸ್ತ್ರಮತ್ತು ಅನುಸಂಧಾನ – ೨೨**

# ಋಷ್ಯಾದಿಗಳ ಸ್ಮರಣೆಯ ಅನುಸಂಧಾನ

**– ಶ್ರೀ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ**

ಮಂತ್ರವೊಂದು ಯಾವ ಛಂದಸ್ಸಿನಲ್ಲಿ ಪೋಣಿಸಲ್ಪಟ್ಟಿದೆಯೋ, ಆ ಛಂದಸ್ಸು, ಮಂತ್ರವನ್ನು ಕಂಡು ಉಳಿದವರಿಗೆ ಉಪದೇಶಿಸಿರುವ ಋಷಿ ಹಾಗೂ ಮಂತ್ರಪ್ರತಿಪಾದ್ಯದೇವತೆ - ಈ ಮೂರು ಮಂತ್ರದ ಪರಿಚಯಕ್ಕೆ ಸಂಬಂಧಿಸುವ ಪ್ರಮುಖ ಅಂಶಗಳು. ಆದುದರಿಂದಲೇ ಈ ಮೂರನ್ನು ಅರಿತು ಹಾಗೂ ಸ್ಮರಣೆಗೆ ತಂದುಕೊಂಡು ಆ ಬಳಿಕವಷ್ಟೇ ಆ ಮಂತ್ರವನ್ನು ಜಪಾದಿಗಳಿಗೆ ವಿನಿಯೋಗಿಸಿಕೊಳ್ಳಬೇಕು - ಎಂದು ವಿಧಿಸಲಾಗಿದೆ. **'ಯೋ ಹ ವಾ ಅವಿದಿತಾರ್ಷಚ್ಛಂದೋ ದೈವತ .....'** - ಎಂಬ ಪ್ರಮಾಣವಂತೂ ಋಷ್ಯಾದಿಗಳನ್ನು ತಿಳಿಯದೆ ಆಯಾ ಮಂತ್ರವನ್ನು ಯಾಗಾದಿಗಳಲ್ಲಿ ವಿನಿಯೋಗಿಸಿಕೊಂಡರೆ ಕೆಟ್ಟ ದುಷ್ಫಲಗಳನ್ನು ಸಾರುವ ಮೂಲಕ ಅವುಗಳ ತಿಳುವಳಿಕೆಯ ಆವಶ್ಯಕತೆಯನ್ನು ದೃಢಪಡಿಸಿದೆ. 'ಬೃಹತ್ಪರಾಶರಸ್ಮೃತಿ' - ಮಂತ್ರಕ್ಕೆ ಸಂಬಂಧಿಸುವ ಛಂದಸ್ಸು, ದೇವತೆ, ಋಷಿ - ಈ ಮೂರರ ಜೊತೆಗೆ ಮಂತ್ರ ಯಾವ ಉದ್ದೇಶಕ್ಕಾಗಿ ಬಳಸಲ್ಪಡುತ್ತಿದೆ? ಹೇಗೆ ಬಳಸಲ್ಪಡುತ್ತಿದೆ? - ಈ ಎರಡೂ ಅಂಶಗಳನ್ನೂ ಸೇರಿಸಿ ಒಟ್ಟು ಐದು ಅಂಶಗಳನ್ನು ತಿಳಿದುಕೊಳ್ಳುವ ಮೂಲಕ ಮಂತ್ರವನ್ನು ಚೆನ್ನಾಗಿ ಪರಿಚಯಿಸಿಕೊಂಡು ಬಳಿಕವಷ್ಟೇ ಅದರ ವಿನಿಯೋಗ ನಡೆಸಬೇಕೆಂದು ಸಾರಿದೆ -

**ಛಂದೋದೈವತಮಾರ್ಷಂ ಚ ವಿನಿಯೋಗಂ ಚ ಬ್ರಾಹ್ಮಣಮ್ ।**
**ಮಂತ್ರಂ ಪಂಚವಿಧಂ ಜ್ಞಾತ್ವಾ ದ್ವಿಜಃ ಕರ್ಮ ಸಮಾಚರೇತ್ ॥**

ಈ ಸಂದೇಶದ ಹಿನ್ನಲೆಯಲ್ಲೇ ಸಂಧ್ಯಾವಂದನೆಯಲ್ಲಿ ಗಾಯತ್ರ್ಯಾದಿಮಂತ್ರಗಳ ಜಪ ನಡೆಸುವ ಮುಂಚೆ 'ಅಸ್ಯ ಶ್ರೀಗಾಯತ್ರೀಮಹಾಮಂತ್ರಸ್ಯ ......' ಇತ್ಯಾದಿಯಾಗಿ ಋಷ್ಯಾದಿಗಳ ಸ್ಮರಣೆಯನ್ನು ನಡೆಸಲಾಗುವುದು.

### ಮಂತ್ರದ ಇದಂತ್ವ ಶ್ರೀಮಂತಿಕೆ ಹಾಗೂ ಮಹತ್ತ್ವ:

'ಅಸ್ಯ ಶ್ರೀಗಾಯತ್ರೀಮಹಾಮಂತ್ರಸ್ಯ ....', 'ಅಸ್ಯ ಶ್ರೀನಾರಾಯಣಾಷ್ಟಾಕ್ಷರಮಹಾ-ಮಂತ್ರಸ್ಯ ....' - ಇತ್ಯಾದಿಯಾಗಿ ಮುಂದೆ ಜಪಕ್ಕೆ ವಿನಿಯೋಗಿಸಲಾಗುವ ಮಂತ್ರವನ್ನು



ಈ (ಅಸ್ಯ) - ಎಂದು ಬುದ್ಧಿಯಲ್ಲಿ ಆಗಾಗಲೇ ಪ್ರಸ್ತುತವಾದದ್ದನ್ನಾಗಿ - ಇದಂತ್ವೇನ - ಪರಾಮರ್ಶಿಸುವ ಉದ್ದೇಶ ಈ ಮಂತ್ರದ ಗುರೂಪದೇಶವನ್ನು ಪಡೆದುಕೊಂಡು ಈಗಾಗಲೇ ಇದರ ಜಪಾರ್ಹತ್ವವನ್ನು ಗಳಿಸಿಕೊಂಡಾಗಿದೆ - ಎಂದು ಈ ಮಂತ್ರವನ್ನು ಜಪಕ್ಕೆ ವಿನಿಯೋಗಿಸಿಕೊಳ್ಳಲು ತನ್ನಲ್ಲಿರುವ ಅರ್ಹತೆಯನ್ನು ದೃಢಪಡಿಸಿಕೊಳ್ಳ-ಲಾಗುವುದು. ಯಾವುದೇ ಮಂತ್ರದ ಪ್ರಸ್ತಾವದಲ್ಲೂ 'ಶ್ರೀ' ಎಂದೂ, 'ಮಹಾ' ಎಂದೂ ಉಲ್ಲೇಖಿಸುವ ಮೂಲಕ ಅದರ ಶ್ರೀಮಂತಿಕೆಯನ್ನೂ, ಮಹತ್ತ್ವವನ್ನೂ ನಮೂದಿಸಲಾಗುವುದು. ಭಗವಂತನ ಹೆಸರುಗಳ ಮಹತ್ತ್ವ ಎಂದರೆ ಹೇಗೆ ಅವನನ್ನು ಪ್ರತಿಪಾದಿಸುವುದೇ ಆಗಿರುವುದೋ ಹಾಗೆಯೇ ಪ್ರತಿಯೊಂದು ಮಂತ್ರದ ಶ್ರೀಮಂತಿಕೆಯೂ, ಮಹತ್ತ್ವವೂ ಭಗವಂತನನ್ನು ಪ್ರತಿಪಾದಿಸುವುದೇ ಆಗಿದೆ. ಭಗವಂತನನ್ನು ಪ್ರತಿಪಾದಿಸುವ ಮೂಲಕ ಅವನ ಸನ್ನಿಧಾನಕ್ಕೆ ಪಾತ್ರವಾಗುವುದಕ್ಕಿಂತ ಬೇರೆ ಯಾವುದು, ಹೇಗೆ ತಾನೇ ಶ್ರೀಮಂತಿಕೆ, ಮಹತ್ತ್ವ ಎನಿಸಬಲ್ಲದು?

ಗಾಯತ್ರೀ, ನಾರಾಯಣಾಷ್ಟಾಕ್ಷರ ಮುಂತಾದ ಮಂತ್ರಗಳು ನೇರವಾಗಿಯೇ ಭಗವಂತನನ್ನು ಪ್ರತಿಪಾದಿಸುವ ಮೂಲಕ ಶ್ರೀಮಂತಿಕೆಗೆ, ಮಹತ್ತ್ವಕ್ಕೆ ಪಾತ್ರವಾಗಿದ್ದರೆ, ದುರ್ಗೆ, ಚತುರ್ಮುಖ, ವಾಯುದೇವ - ಇತ್ಯಾದಿ ಇತರ ದೇವತಾಪ್ರತಿಪಾದಕ ಮಂತ್ರಗಳೂ ಮಿಶ್ರಸ್ತುತಿಯ ಪ್ರಕ್ರಿಯೆಗೆ ಒಳಗಾಗಿ ಆಯಾ ದೇವತಾಂತರ್ಯಾಮಿಯಾದ ಭಗವಂತನನ್ನೇ ಮುಖ್ಯವಾಗಿ ಆಯಾ ಮಂತ್ರದ ಮೊದಲ ಹಾಗೂ ಕೊನೆಯ ಓಂಕಾರದಿಂದ ಪ್ರತಿಪಾದಿಸುತ್ತಿವೆ ಎಂದು ಶ್ರೀಮಧ್ವರು ತಂತ್ರಸಾರಸಂಗ್ರಹದಲ್ಲಿ (೪-೭೯) ಸಾರಿರುವರು :

**ಮಂತ್ರೇಷ್ವೇತೇಷು ಸರ್ವೇಷು ವಾಚ್ಯಸ್ತಾರೇಣ ಕೇಶವಃ ।**
**ಅಂತರ್ಯಾಮಿತಯಾ ಧ್ಯೇಯಃ ಸರ್ವದೇವೇಷು ಸರ್ವದಾ ॥**

ಆದ್ದರಿಂದ ಭಗವಂತನನ್ನು ಸ್ಪಷ್ಟವಾಗಿ ಪ್ರತಿಪಾದಿಸುವ ಗಾಯತ್ರೀ ಮುಂತಾದ ಮಂತ್ರಗಳನ್ನು ಜಪಿಸುವಾಗ ಹೇಗೋ ಹಾಗೆಯೇ ದುರ್ಗೆ, ಚತುರ್ಮುಖ ಮುಂತಾದ ಇತ್ಯಾದಿ ಮಂತ್ರಗಳನ್ನು ಜಪಿಸುವಾಗಲೂ ಮುಖ್ಯವಾಗಿ ಭಗವಂತನನ್ನು ಪ್ರತಿಪಾದಿಸುವ ಶ್ರೀಮಂತಿಕೆಯನ್ನೂ , ಮಹತ್ತ್ವವನ್ನೂ ಅನುಸಂಧಾನಕ್ಕೆ ತಂದುಕೊಳ್ಳಬೇಕು.

ಭಗವಂತನನ್ನು ಪ್ರತಿಪಾದಿಸುವ ಶ್ರೀಮಂತಿಕೆಯ ಹಾಗೂ ಮಹತ್ತ್ವದ ಜೊತೆಗೆ ಭಕ್ತಿ, ಜ್ಞಾನ, ವಿರಕ್ತಿಗಳನ್ನು ಉಂಟುಮಾಡುವ ಹಾಗೂ ಆ ಮೂಲಕ ಕ್ರಮೇಣ ಮುಕ್ತಿಸಾಧಕತ್ವ ಶ್ರೀಮಂತಿಕೆಯನ್ನೂ, ಮಹತ್ತ್ವವನ್ನೂ ಅನುಸಂಧಾನ ಮಾಡಬೇಕು. ಈ ಉದ್ದೇಶದಿಂದಲೇ 'ಶ್ರೀಮಹಾಮಂತ್ರಸ್ಯ' - ಎಂದು ಉಲ್ಲೇಖಿಸಲಾಗುವುದು.

**ಋಷಿಸ್ಮರಣೆ :**

‘ಯಃ ಪಶ್ಯತಿ ಸ್ವಯಂ ವಾಕ್ಯಂ ಸ ಋಷಿಸ್ತಸ್ಯ ಕೀರ್ತಿತಃ’ - ಎಂದು ಋಗ್ಭಾಷ್ಯದಲ್ಲಿ (೧-೩೧) ತಿಳಿಸಿರುವಂತೆ ಗುರುಗಳ ಉಪದೇಶವಿಲ್ಲದೆಯೇ ಶ್ರೀವಾಸುದೇವನ ಅನುಗ್ರಹವಿಶೇಷದಿಂದಾಗಿ ಇದ್ದಕ್ಕಿದ್ದಂತೆ ಮಂತ್ರದ ಸ್ಫುರಣೆಗೊಳಗಾಗುವ ವ್ಯಕ್ತಿ ಆ ಮಂತ್ರದ ‘ಋಷಿ’ ಅರ್ಥಾತ್ ‘ದ್ರಷ್ಟಾರ’ ಎನಿಸುವವನು. ತನ್ನ ದರ್ಶನದ ಮೂಲಕ ಆ ಮಂತ್ರವನ್ನು ನಮ್ಮ ಉಪಯೋಗಕ್ಕಾಗಿ ಅನುಗ್ರಹಿಸಿ ಉಪಕರಿಸಿರುವವನು ಎಂಬ ದೃಷ್ಟಿಯಿಂದ ಕೃತಜ್ಞತಾರೂಪದಲ್ಲಿ ಋಷಿಯನ್ನು ಸ್ಮರಿಸಬೇಕಲ್ಲದೆ, ಆ ಮಂತ್ರವಿದ್ಯೆಯನ್ನು ಹೊರಹೊಮ್ಮಿಸಿದ ಗುರು ಎಂಬ ದೃಷ್ಟಿಯಿಂದಲೂ

**‘ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।**
**ತಸ್ಯೈತೇ ಕಥಿತಾಃ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥’**

- ಎಂಬ ಶ್ವೇತಾಶ್ವತರೋಪನಿಷತ್ತಿನ ಸಂದೇಶಕ್ಕೆ ಅನುಗುಣವಾಗಿ ಗುರುಸ್ಥಾನೀಯನಾದ ಆ ಋಷಿಯನ್ನು ಭಕ್ತಿಯಿಂದ ಸ್ಮರಿಸಿಕೊಂಡರೆ ಆ ಮಂತ್ರದ ಅರ್ಥವಿಶೇಷಗಳ ಸ್ಫುರಣೆ ಸಾಧ್ಯ ಎಂದೂ ಅವನನ್ನು ಸ್ಮರಿಸಿಕೊಳ್ಳಬೇಕು.

ಹಯಗ್ರೀವ, ವೇದವ್ಯಾಸ, ಕಪಿಲ - ಮುಂತಾದ ಭಗವದ್ರೂಪಗಳೂ, ಚತುರ್ಮುಖ ಮುಂತಾದ ದೇವತೆಗಳೂ ಮುಖ್ಯವಾಗಿ ಋಷಿಗಳಾಗಿದ್ದು ಆ ಬಳಿಕ ಅಮುಖ್ಯವಾಗಿಯಷ್ಟೇ ಈ ವ್ಯಕ್ತಿ ವಾಸುದೇವನ ಅನುಗ್ರಹದಿಂದ ಋಷಿ ಎನಿಸಿರುವನು - ಎಂಬ ನಿರ್ಧಾರದೊಂದಿಗೆ ವಿಶ್ವಾಮಿತ್ರಾದಿಗಳನ್ನು ಋಷಿಗಳನ್ನಾಗಿ ಸ್ಮರಿಸಿಕೊಳ್ಳಬೇಕು. ಋಷಿಸ್ಮರಣೆ ಬರೇ ‘ವಿಶ್ವಾಮಿತ್ರಃ ಋಷಿಃ’ - ಎಂಬ ನಾಮಸ್ಮರಣೆಗಷ್ಟೇ ಸೀಮಿತಗೊಳ್ಳದೆ, ಅವರ ಋಷಿವ್ಯಕ್ತಿತ್ವದ, ವಿಶೇಷವಾಗಿ ಗಾಯತ್ರ್ಯಾದಿಮಂತ್ರದರ್ಶನಕ್ಕೆ ಸಂಬಂಧಿಸುವ ಸಾಧನೆಯ ಸ್ಮರಣೆಯೊಂದಿಗೆ ಅವರ ಸ್ಮರಣೆಯನ್ನು ನಡೆಸುವಂತಾಗಬೇಕು. ‘ಹೃದಿಸ್ಥೋ ಬಾದರಾಯಣಃ । ಓಂಕಾರ ಪೂರ್ವಕಾ ವಿದ್ಯಾಃ ಪ್ರೇರಯತ್ಯಖಿಲೇಷ್ವಪಿ । ಸದೈವ ....’ - ಎಂದು ಸಾತ್ವತಸಂಹಿತೆ (ಋ.ಭಾ. ೧-೨೭) ತಿಳಿಸುತ್ತಿರುವಂತೆ ಪ್ರಕೃತಋಷಿಗೂ ಹೃದಯದಲ್ಲಿರುವ ವೇದವ್ಯಾಸರು ಪ್ರಕೃತ ಮಂತ್ರವಿದ್ಯೆಯ ಸ್ಫುರಣೆ ಋಷಿಗೆ ಬರುವಂತೆ ಮಾಡಿ ಆ ವಿದ್ಯೆಗೆ ಅವರು ಋಷಿ ಎನಿಸಿರುವಂತೆ ಅನುಗ್ರಹಿಸಿರುವರು - ಎಂದು ಶ್ರೀವೇದವ್ಯಾಸರ ಸ್ಮರಣೆಯೊಂದಿಗೇ ಋಷಿಸ್ಮರಣೆಯನ್ನು ನಡೆಸಬೇಕಾದದ್ದು .

(ಮುಂದಿನ ಸಂಚಿಕೆಯಲ್ಲಿ : ಛಂದಃಸ್ಮರಣೆಯ ಅನುಸಂಧಾನ)

*****



# ಶ್ರೀವಿಜಯದಾಸರ ಸುಳಾದಿಯಲ್ಲಿ ವಿರಾಡ್ರೂಪವರ್ಣನೆ

– ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಶ್ರೀಮದ್ಭಾಗವತದ ದ್ವಿತೀಯಸ್ಕಂಧದಲ್ಲಿ ಬಂದಿರುವ ವಿರಾಡ್ರೂಪವರ್ಣನ ಅಂತ್ಯ-ಕಾಲದ ಚಿಂತನೆಗೆ ಕಡ್ಡಾಯವಾಗಿ ವಿಹಿತವಾದ ಅಪೂರ್ವಭಾಗ. ಇದನ್ನು ಶ್ರೀವಾದಿರಾಜ ಸ್ವಾಮಿಗಳು ಕನ್ನಡ ಪದ್ಯರೂಪದಲ್ಲಿ ಸಮಗ್ರವಾಗಿ ನೀಡಿರುವರು. (ನೋಡಿ: ‘ಹರಿಭಜನಕಲ್ಪದ್ರುಮ’, ಪು. ೨೬೫). ಪ್ರಸ್ತುತ ಶ್ರೀವಿಜಯದಾಸರ ಸುಳಾದಿಯೊಂದರಲ್ಲಿ ಇದರ ವಿಸ್ತೃತನಿರೂಪಣೆ ಬಂದಿದ್ದು, ಅದು ಇಲ್ಲಿ ಕಳೆದ ಸಂಚಿಕೆಯಿಂದ ಮುಂದುವರೆದಿದೆ :

ಝಂಪಿತಾಳ

**ಪೃಥ್ವಿ ಉತ್ಪಾದಕ ತದಾಶ್ರಯವಾಗಿದೆ ।**
**ಚತುರಮೊಗ ಭವ ಮುಖ್ಯ ಸುರವಂದಿತ ।**
**ಸತತ ಧ್ವಜ ವಜ್ರಾಂಕುಶ ಶಂಖ ಚಕ್ರ ಶೋ ।**
**ಭಿತ ಗದಾ ಪದುಮ ಲಾಂಛನ ಸ್ವರ್ನದಿಯ ಜನಕ ।**
**ಚತುರ್ಜಾತಿ ಉದ್ಭವ ತರುಣಾದಿತ್ಯ ವರ್ಣ ।**
**ಅತಿಶಯ ಅಶ್ವತರ್ಯುಷ್ಣ ಗಜ ಜನಕ ರ ।**
**ತುನ ಕಾಂತಿಗೆ ಮಿಗೆ ಸಖ ಭಕ್ತ ಜನಕ ಆ ।**
**ಶ್ರಿತವಾಗಿ ಇಪ್ಪ ಪದ ರಸಾತಳೋತ್ಪಾದಕ ।**
**ದಿತಿ ಸುತರು ಇಲ್ಲುಂಟು ನಾಮ ಭೇದದಲ್ಲಿ ಉ ।**
**ತ್ಪತ್ತಿ ಮೊದಲಾದ ಮಹ ಸಾಹಸದಲ್ಲಿ ।**
**ತತಿ ಸಹಿತವೊಂದು ಬಿಲದಲ್ಲಿ ಉಳಗೆ ಅಡಗಿಹರು ಅ ।**
**ಚ್ಯುತನ ವಾಗ್ರೂಪ ಮಂತ್ರದ ಭೀತಿಗೆ ।**
**ಕಥೆಯುಂಟು ಇಲ್ಲೊಂದು ಶ್ವಾನ ರೂಪವುಳ್ಳ ।**
**ಶತ ಮೇಧದಲ್ಲಿ ಇದ್ದ ತನ್ನಾಮಕ ಹರಿ ।**
**ತತುವೇಶರೊಡನೆ ಪೂಜೆಯಗೊಳುತಿಪ್ಪ ।**
**ಪತಿತ ಪಾವನ ನಮ್ಮ ವಿಜಯವಿಟ್ಠಲರೇಯನ ।**
**ಸತತ ಧ್ಯಾನವ ಮಾಡಿರೊ ಪಾದ ಪೃಷ್ಟವನು ॥ ೪ ॥**

ತ್ರಿವಿಡಿ ತಾಳ

ಪರಡು ಎರಡರಲ್ಲಿ ತಜ್ಜನ್ಯ ತದಾಶ್ರಯ ।
ಮೆರೆವ ಮಹಾತಳ ಲೋಕವಿಪ್ಪದು ಅಲ್ಲಿ ।
ಉರಗ ನಾಯಕರು ಬಹು ಶಿರಸಾವುಳ್ಳವರು ವಿ ।
ಸ್ತರವಾಗಿ ತಮ್ಮ ಬಳಗೆ ಸಹಿತದಲ್ಲಿ ।
ಮರಳೆ ಕುಲಹಕಿ ತಕ್ಷಕ ಕಾಲಿಯ ಸುಶೇಣ ।
ವರ ಕ್ರೋಧವಶವಾದ ಸರ್ಪಗಳು ವಾಸ ।
ಗರುಡನ ಭಯದಿಂದ ಸತಿಸುತರೊಡನೆ ಸಂ ।
ಚರಿಸುತ್ತಲಿಪ್ಪರು ಸ್ವಲ್ಪ ಪ್ರಮತ್ತರಾಗಿ ।
ಶರಧಿ ಶಯನ ನಮ್ಮ ವಿಜಯವಿಟ್ಠಲ ಮೂರುತಿಯ ।
ಸ್ಮರಿಸಿ ಧ್ಯಾನವ ಮಾಡೊ ಗುಲ್ಭದ ದ್ವಯದಲ್ಲಿ ॥ ೫ ॥

ಧ್ರುವತಾಳ

ಗುಣಿಸು ತಳಾ ತಳೋದ್ಭವ ಕ್ರಮೂಲ ವೃತ್ತ ಪಾ ।
ವನ ವರಜಂಘೆ ದ್ವಯದ ತದಾಶ್ರಯವೆನ್ನು ।
ದನುಜ ಕುಲದ ಬಡಿಗ ಮಯನೆಂಬುವನು ನಿ ।
ಪುಣದಿಂದ ತಾನೆ ಮಾಡಿದ ತ್ರಿಪುರವ ।
ಅನಲಾಕ್ಷನಿಂದ ಚಕ್ರದಿಂದಲಿ ಅಂದು ನಾ ।
ಶನವಾಗಿ ಪೋದಮೇಲೆ ಹರಿ ಪ್ರಸಾದ ।
ಘನವಾಗಿ ಸಂಪಾದಿಸಿ ಮಹದೇವನಿಂದ ರ ।
ಕ್ಷಣೆಯಾಗಿ ಸುಖಸುತಿಪ್ಪ ಪ್ರಬಲನಾಗಿ ।
ಗುಣವಂತ ಮಹ ದೈವ ವಿಜಯವಿಟ್ಠಲರೇಯನ ।
ನೆನಿಸು ತಳಾತಳ ಜಂಘೆ ದ್ವಯದಲ್ಲಿ ॥ ೬ ॥

ರೂಪಕ ತಾಳ

ಚನ್ನಾಗಿ ನೋಳ್ಪದು ಸುತಳ ಲೋಕದ ಸ್ಥಿತಿ ।
ಕನ್ನಡಿಯಂತಿಪ್ಪದು ಜಾನುಮಂಡಲ ದ್ವಯದಿ ।
ಬಿನ್ನಣದಿಂದಲಿ ಪುಟ್ಟಿತು ನೋಡಾ ಸಂ ।
ಪನ್ನ ಸತ್ಕೀರ್ತಿ ಪ್ರತಾಪ ಸಜ್ಜನ ಮಣಿ ।
ಪುಣ್ಯ ಶ್ಲೋಕ ಬಲಿ ಚಕ್ರವರ್ತಿ ಮಹ ।
ಧನ್ಯನು ಕಣೊ ವಾಮನ ರೂಪ ಕೃಷ್ಣಗೆ ।



ತನ್ನ ಮಸ್ತಕವಿತ್ತು ದಾನವಾಂತಕನ ಕಾ ।
ರುಣ್ಯ ಸಂಪಾದಿಸಿ ಇಂದ್ರಪದವಿ ಪಡೆದ ।
ಇನ್ನಿತು ಧ್ಯಾನಿಸಿರೊ ವಿಜಯವಿಟ್ಠಲನು ಪ್ರ ।
ಸನ್ನ ನಾಗುವ ಬಿಡದೆ ಭಕುತಿಗೆ ಒಲಿದು ॥ ೭ ॥

ಝಂಪಿತಾಳ

ಇಂದ್ರಿರಾಶ್ರಯ ವೈಶ್ಯಕುಲಜನ್ಯ ತದಾಶ್ರಯಾ ।
ನಂದ ಪ್ರಭಾಶೋಭನ ಪರಮೋರು ದ್ವಯವು ।
ಅಂದು ಪುಟ್ಟಿದ ಲೋಕ ವಿತಳವೆನಿಸುವದು ಮಯ ।
ನಿಂದ ಜನಿಸಿದ ಬಲನೆಂಬೊ ದನುಜಾ ।
ನಿಂದ ಪುಟ್ಟಿದ ತೊಂಭತ್ತಾರು ಮಾಯಗಳು ಬಲು ।
ಸಾಂದ್ರವಾಗಿವೆ ಇವೆ ಓದುವ ಜನರ ।
ಸಂದೋಹರುಂಟು ಬಲ ಆಕಳಿಸಿದರೆ ಮುಖ ।
ದಿಂದ ಪೂಂಶ್ಚಲಿ ನಾರಿಯರು ದ್ಭವ ।
ಮಂದಹಾಸದಲ್ಲಿ ಪುರುಷರೊಡನೆ ಮನ ।
ಬಂದಂತೆ ಕ್ರೀಡಿಪರು ಅನುರಾಗದಿ ।
ಇಂದು ಮೌಳಿ ಅಲ್ಲಿ ಹಾಟಕಾಖ್ಯನದಿ ।
ಪೊಂದಿ ಪರಿವಾರದಿಂದಲ್ಲಿ ವೊಪ್ಪುತ ।
ಒಂದೊಂದು ವಾಲಗವ ಕೈಕೊಳುತ ಪರ್ವತ ।
ನಂದಿನಿಯ ಕೂಡ ಕ್ರೀಡೆಯನಾಡುತ ।
ಚಂದವಾಗಿದೆ ನೋಡಿ ಈ ಜನರು ಆಯುತ ।
ಶಿಂಧೂರ ಬಲ ಸಮರು ಸಕಲ ಕಾಲ ।
ವೃಂದಾರಕ ವಂದ್ಯ ಹಾಟಕ ನದಿಯಲ್ಲಿ ।
ಬಂದು ಪಾವನ ಮಾಡಿ ಹಾಟಕ ಸ್ವರ್ನ ।
ಒಂದೊಂದು ವಿಚಿತ್ರ ಭೂಷಣವು ಧರಿಸಿ ಗುಣ ।
ದಿಂದ ಚರಿಸುವರು ಹರಿ ಸೇವೆಯಲ್ಲಿ ।
ಒಂದೊಂದನಂತ ರೂಪ ವಿಜಯವಿಟ್ಠಲರೇಯಗೆ ।
ವಂದಿಸಿ ವಿತಳ ಲೋಕದ ಮಹಿಮೆ ತಿಳಿಯೊ ॥ ೮ ॥

ತ್ರಿವಿಡಿ ತಾಳ

ಅತಳ ಲೋಕ ಸರ್ವ ಮೃಗ ಪಶು ಜಾತಿವು ।
ತ್ಪತ್ತಿ ಕಾಣೊ ಶ್ರೋಣಿದೇಶದಿಂದ ಅಲ್ಲೀಗ ।

ಅತಿ ಮೋದದಿಂದ ನಾನಾಪರಿ ವನವು ।
ನ್ನತ ಕ್ರೀಡೆಯೊಡೆ ಆಡುವ ದೈತ್ಯ ದಾನವ ಕದ್ರುವೆ ।
ಸುತರು ಮಿಗಿಲಾದವರು ತಮ ತಮ್ಮ ನಿಜನಾರಿ ।
ಸುತ ಬಂಧುಗಳು ಬಳಗ ಕೂಡ ಇಹರಯ್ಯ ಲೇಸಾಗಿ ।
ಪ್ರತಿಯಿಲ್ಲದೆ ಮಯನ ಮಾಯದಿಂದಲಿ ಮಹ ।
ರತುನ ತೆತ್ತಿಸಿದ ಮನಿಗೋಪುರ ಉಪ್ಪರಿಗಿ ಬೀದಿ ।
ಚತುರಂಗ ಮೊದಲಾದ ಶ್ರೀಂಗಾರ ಸ್ಥಳಗಳು ।
ಮಿಥುನ ಭಾವವುಳ್ಳ ಮೃಗ ಪಕ್ಷಿ ಜಾತಿಗಳು ।
ಶತಪತ್ರ ಮೊದಲಾದ ಪುಷ್ಪ ಫಲ ತರುಜಾತಿ ।
ಕೃತ ಕೃತ್ಯರಾಗಿ ಎಲ್ಲರಿಗೆ ವಾಸವಕ್ಕು ।
ಚ್ಯುತ ದೂರ ವಿಜಯವಿಟ್ಠಲ ಆತ್ಮನಹುದೆಂದು ।
ಅತಳ ಲೋಕವನು ಧ್ಯಾನವ ಮಾಡು ಮನುಜಾ ॥ ೯ ॥

ರೂಪಕ ತಾಳ

ಅವನಿ ಉತ್ಪಾದಕ ತದಾಶ್ರಯವಾಗಿ ಮಿಂ ।
ಚುವ ಜಾಂಬೂನದ ವಸನ ಸ್ವರ್ಣಮಂಜೀರ ಜಘನ ।
ರವಿಯಂತೊಪ್ಪುವ ನಾನಾ ಪ್ರಕಾರದಲ್ಲಿ ।
ನವ ಖಂಡವುಳ್ಳ ಜಂಬುದ್ವೀಪ ವುಳಿದಾದ ।
ಭುವನ ರಾಶಿಯೊಳು ಅಲ್ಲಿಗಲ್ಲಿಗೆ ದ್ವೀಪ ।
ವಿವರ ಪರ್ವತ ನದಿಗಳು ಕರ್ಮಸಾಧನ ಮಾ ।
ಡುವ ಮೃಗ ಪಶು ಪಕ್ಷಿ ಮಾನವರುಂಟು ।
ದಿವಿಜ ದಾನವರ ಅವತಾರಗಳಾಗೋವು ।
ತವಕದಿಂದಲಿ ಹರಿಯ ಅವತಾರಗಳುಂಟು ।
ದಿವಾ ರಾತ್ರಿ ಎಂಬೋದು ಈ ಲೋಕದಲಿಸಿದ್ಧ ।
ಕವಿಗಳು ಪೇಳ್ವರು ಮಹ ಪುಣ್ಯಮಾಳ್ಪರು ।
ಅವಿಕಾರಮೂರ್ತಿ ನಮ್ಮ ವಿಜಯವಿಟ್ಠಲರೇಯನ ।
ಪವನನ ಮಧ್ಯದಲ್ಲಿ ಯಿನಿತು ಚಿಂತಿಸಬೇಕು ॥ ೧೦ ॥

ಮಟ್ಟತಾಳ

ಪೊಕ್ಕಳ ಬಗದಿಂದಂತರಕ್ಷದ ಲೋಕ ।
ವ್ಯಕ್ತವಾಯಿತು ನೋಡಿ ಯಿದರ ವರ್ನ ।
ಉತ್ತೆಯಿಂದಲಿ ಕೇಳಿ ಮೇಘಾದಿ ಮಂಡಲವು ।



ಉಕ್ತಕ್ರಮದಿಂದ ಯೋಜನದ ಭೇದ ।
ದಿಕ್ಕು ಪಾಲಕರುಂಟು ಅಲ್ಲಿಗಲ್ಲಿಗೆ ದೇವ ।
ಲಕ್ಕುಮಿ ರಮಣನು ವಾಲಗವ ಕೊಂಬುವನು ।
ಇಕ್ಕೆಲದಲ್ಲಿ ವುಳಿದ ದೇವತೆಗಳುಂಟು ।
ರುಕ್ಕುಮಾ ಪರ್ವತಕ್ಕಾಧಾರನಾಗಿ ।
ಭಕ್ತವತ್ಸಲ ಹರಿ ಶಿಂಶುಮಾರ ।
ಶಕ್ತಿ ಅನಂತವುಳ್ಳ ಪರಮಾತ್ಮ ದೇಹದಲಿ ।
ನಕ್ತಾದಿಗಳನುದ್ಧರಿಸಿ ಕಾವುತಲಿಪ್ಪ ।
ಅಕ್ಕಟ ಬಾಲಾಗ್ರದಲಿ ಧ್ರುವರಾಯ ಬಾಲದಲಿ ।
ಶಕ್ತಿಧರ ಪ್ರಜಾಪತಿ ಇಂದ್ರ ಧರ್ಮ ।
ತಕ್ಕವರೆನ್ನು ಪುಚ್ಛಮೂಲಧಾತಾ ವಿಧಾತ ।
ತರ್ಕೈಸಿದಂತೆ ಕುಕ್ಷಿಯಲಿ ಸಪ್ತ ಋಷಿಗಳು ।
ಶುಕ್ರನಾಭಿಯಲ್ಲಿ ಮನಸಿನಲಿ ಚಂದ್ರಮ ।
ಅರ್ಕವಕ್ಷ ಸ್ಥಳದಲ್ಲಿ ಕಕುಭ ಬ್ರಹಸ್ಪತಿ ।
ರಕ್ತಾಂಗ ಮುಖದಲ್ಲಿ ಶಶಿ ಉಪಸ್ಥದಲ್ಲಿ ।
ಮಿಕ್ಕಾದವರುಂಟು ಬುಧರಾಹು ಕೇತು ತಾ ।
ರಕ್ಕಿಗಳು ವೊಂದೊಂದು ಸ್ಥಾನ ವಿಶೇಷದಲಿ ।
ಸಿಕ್ಕಿಕೊಂಡಿಪ್ಪರು ಯೆಲ್ಲಕಾಲದಿ ಬಿಡದೆ ।
ಚಕ್ರದಂತೆ ತಿರುಗಿ ಹೊತ್ತುಗಳ ನಡಿಸುತ್ತ ।
ಚಕ್ರಧರ ವೃಶ್ಚಿಕಾ ಕಾರನಾಗಿ ।
ಮುಕ್ತರಿಗೆ ದರುಶನವ ಕೊಡುವ ವಿಜಯವಿಟ್ಠಲ ।
ಲೆಖ್ಖವಿಲ್ಲದೆ ವೈಮಾನಿಕರ ಪಾಲಿಪನು ॥ ೧೧ ॥

ತ್ರಿವಿಡಿ ತಾಳ

ಸುರಲೋಕೋತ್ಪಾದಕ ತದಾಶ್ರಯ ತದ್ಭಿನ್ನ ।
ಪರಮ ಸುಂದರ ವಿಗ್ರಹ ನಿತ್ಯ ಇಂ ।
ದಿರೆ ಭುಜಾಂತರ್ಗತ ಅನಘರನ್ನಮಯ ವನಮಾಲಾ ।
ಪರಿ ಪರಿಹಾರ ವಿಸ್ತರ ಭೂಷಣ ।
ಪುರುಹೂತನಿಲ್ಲಿ ವಾಮದೇವನ ಪೂಜಿಸುವ ।
ಸರಿ ಸರಿ ಬಂದಂತೆ ಭೋಗದಲ್ಲಿ ನಲಿವ ।
ಕರಿ ಐರಾವತ ಉಚ್ಚೈಶ್ರವವೆಂಬ ತುರಗ ತಳೋ ।

ದರಿಶಬೆ ಸೂತ ಮಾತಳಿ ನಂದನವನವು ।
ಪುರವೆ ಅಮರಾವತಿ ಸಿಂಹಾಸನದಿ ಶ್ರೀಂ ।
ಗರದಿಂದ ಕುಳಿತು ಲೋಕದಲಿ ನಾನಾ ರೂಪ ।
ಧರಿಸಿದ ನಿರ್ಜರರು ಇಂದ್ರದೇವನ ಬಲು ।
ಹರುಷ ವುಳ್ಳವರಾಗಿ ಭಜಿಸುವರು ।
ತರಣಿ ಪ್ರಕಾಶ ನಮ್ಮ ವಿಜಯವಿಟ್ಠಲರೇಯನ ।
ನಿರುತ ಧ್ಯಾನವ ಮಾಡೆ ದಿವ ಲೋಕವ ॥ ೧೨ ॥

ಧ್ರುವ ತಾಳ

ಮತ್ತೆ ಮಹರ್ಲೋಕೋತ್ಪಾದಕ ತದಾಶ್ರ ।
ಯ ತದ್ಭಿನ್ನ ಕಂಬು ಸನ್ನಿಭ ।
ಕೌಂಸ್ತೂಭ ಭೂಷಣ ಅಖಿಳ ವೇದೋಚ್ಚಾರ ಕಂಠ ।
ವೃತ್ತ ವಿರೋಧಿ ಇಂದ್ರ ಪ್ರಭುವಾಗಿ ಇಪ್ಪಸ ।
ಮಸ್ತ ದೇವತೆಗಳು ಪ್ರದ್ಯುಮ್ನ ಅನಿರುದ್ಧ ।
ಉತ್ತಮ ನಾರದ ಋಷಿ ಅಲ್ಲಿಇದ್ದು ಶ್ರೀ ಹರಿಯ ।
ಚಿತ್ತದಲಿ ಧ್ಯಾನಮಾಡುವರಯ್ಯಾ ।
ಇತ್ತ ಲಾಲಿಸಿ ಕೇಳಿ ಇಂದ್ರಾಗ್ನಿ ಬ್ರಹ್ಮಾಣಿ ಸರ ।
ಸ್ವತ್ಯೋತ್ಪಾದಕ ಜ್ಞಾನನಿಧಿ ಮಹಪರಮ ।
ಕತ್ತಲೆ ನಾಥ ಸಹಸ್ರ ಮಿಗೆ ಕಾಂತೆ ।
ಭಕ್ತರ ಭವತಾಪ ನಾಶ ಜನೋಲೋಕೋತ್ಪಾದಕ ಮುಖ ।
ಮೈತ್ರೇಯ ಸನಕಾದಿ ಋಷಿಗಳು ರುದ್ರ ಅಧಿ ।
ಪತ್ಯನಾಗಿ ಇಪ್ಪಲೋಕದಲ್ಲಿ ।
ಶಕ್ತ್ಯಾದಿ ದೇವತೆಗಳು ಭೂತಗಣ ಸಮಸ್ತ ।
ಸ್ತೋತ್ರ ಮಾಡುವರು ಶಿವನ ಬೃಹಸ್ಪತಿ ವಾಸ ।
ಚಿತ್ರವಾದ ಉದ್ಯಾನವನಗಳಿಪ್ಪವು ವಿ ।
ಚಿತ್ರ ಧ್ವನಿ ಮಾಡುವ ಖಗ ಮೃಗ ಜಾತಿ ।
ಚಿತ್ತದೊಡೆಯ ನಮ್ಮ ವಿಜಯವಿಟ್ಠಲರೇಯನ ।
ನಿತ್ಯ ಈ ಪರಿಯಿಂದಲಿ ಧ್ಯಾನವ ಮಾಡಿರೋ ॥ ೧೩ ॥

ತ್ರಿವಿಡಿ ತಾಳ

ರುದ್ರೋತ್ಪಾದಕ ತಪೋಲೋಕ ಲಲಾಟ ।
ಪದುಮ ಸಂಭವನಲ್ಲಿ ಅಧಿ ಪತಿಯು ।



ರುದ್ರನು ಇರುತಿಪ್ಪ ಸಕಲ ಋಷಿಗಳೊಡನೆ ।
ರೌದ್ರ ಮೂರುತಿ ನೃಕೇಸರಿಯ ಪೂಜಿ ।
ನಿರ್ದೋಷ ಮನದಲ್ಲಿ ಮಾಡುತ್ತಲಿ ತನ್ನ ।
ಪೊದ್ದಿಕೊಂಡು ಸ್ತೋತ್ರ ಗೈವುತಲಿ ।
ತ್ರಿದ್ದೇಶ ನಾಯಕನು ದೇವತೆಗಳ ಕೂಡ ।
ರುದ್ರನ್ನ ಭಜಿಸುವರು ವಿನಯದಿಂದ ।
ಬುದ್ಧಿವಂತರುವುಂಟು ವೇದಾಭಿಮಾನಿಗಳು ।
ಉದ್ಯಾನವ ಮತ್ತೆ ಪುರಗೋಪುರ ।
ಪದ್ಮ ಗರ್ಭನ್ನ ನೋಡಗೋಸುಗಸುರರೆಲ್ಲ ।
ರುದ್ರನ್ನ ಬಳಿವಿಡಿದು ಪೋಗುವರು ।
ಭದ್ರ ಮೂರುತಿ ನಮ್ಮ ವಿಜಯವಿಟ್ಠಲನಂಘ್ರಿ ।
ಪದ್ಮ ಪೊಂದಬೇಕಾದರೆ ತಪೋಲೋಕ ಚಿಂತಿಸು ॥ ೧೪ ॥

ಝುಂಪೆತಾಳ

ವಿರಂಚಿ ಸತ್ಯ ಲೋಕೋತ್ಪಾದಕ ಶೀರ್ಷ ।
ಸರ್ವ ಅವತಾರ ಶ್ರೀಹರಿ ಮೂರ್ತಿಯ ।
ಪರಿ ಪರಿಯಿಂದಲಿ ಚತುರ್ಮುಖ ಪೂಜಿಪನು ।
ಸುರರಾದಿ ಗಣದಿಂದ ಸ್ತುತಿಸಿ ಕೊಳುತ ।
ಮರುತದೇವನು ಅಲ್ಲಿ ವಾಸವಾಗಿ ಇಪ್ಪ ಅತಿ ।
ಪರಮ ಪ್ರಧಾನತನ ಮಾಡಿ ಕೊಳುತ ।
ವಿರಜೆಯೆಂಬೋ ನಾಮದಿಂದ ಗಂಗೆಯು ಬಿಡದೆ ।
ಕರೆಸಿಕೊಂಬುವಳು ಪವಿತ್ರಳಾಗಿ ।
ತರುವಾಯ ಮಹ ಮಹಿಮೆ ತೋರಿಕೊಳುತ ಭಜ ।
ಕರ ಪಾಪವು ಭೂಲೋಕದಲಿ ಕಳೆವುತ್ತ ।
ಎರಡೇಳು ಭುವನದ ವರ್ತಮಾನವ ತಿಳಿದು ।
ಇರಳು ಹಗಲು ಯೋಚನೆ ಮಾಡಿರಯ್ಯಾ ।
ವರ ಶೀರ್ಷ ಪಾದ ಮೂಲ ಮಧ್ಯದಲ್ಲಿದ್ದ ವಿ ।
ಸ್ತರವೆಲ್ಲ ಧೇನಿಸು ಸರ್ವಾಂಗದಿ ।
ಪುರುಷ ಪಾಲಕ ಸಿರಿ ವಿಜಯವಿಟ್ಠಲರೇಯನ ।
ಚರಿತೆಯನು ಕೊಂಡಾಡಿ ಮನದಣಿಯ ನೋಡಿ ॥ ೧೫ ॥

ಮಟ್ಟತಾಳ

ಪಾ(ಪ)ದದಲಿ ಜಯಂತ ಮೇಂಢ್ರದಿಂದ ದಕ್ಷ।
ಉದುಭವಿಸಿದನು ಮಿತ್ರ ವೃಷಣದ್ವಯದಿಂದ।
ಒದಗಿ ರೇತಸು ರುದ್ರ ಜರಾಯುಜ ಶಶಿ।
ನದಲಿ ಪುಟ್ಟಿತು ನೋಡ ಕೇತಸಿನಿಂದಲ್ಲಿ।
ಉದಕ ಜನಕ ವೀರ್ಯದಿಂದಲಿ ಬ್ರಹ್ಮಾಂಡ।
ತ್ರಿದಶ ಗಣದಿ ಅನ್ನ ಉದ್ಭವವೆನ್ನು।
ಸ್ವಧ ಸ್ವಹಾ ವೆರಡು ವೀರ್ಯ ಗುಣದಿಂದ।
ಉದಧಿಗಳು ತನುವ ಧರದಿಂದಲಿ ಸಿದ್ಧ।
ಇದೆ ಪಾರ್ಶ್ವಗಳಲ್ಲಿ ಶೇಷ ಗರುಡಾದಿ ವಾಸ।
ಹೃದಯದಲ್ಲಿ ಮೂಲ ಪ್ರಕೃತಿ ಆಶ್ರಯವು।
ವಿಧಿ ರುದ್ರಾದಿಗಳು ಮಧ್ಯ ದೇಹದಿಂದ।
ಮುದದಿಂದಲಿ ಕೇಳಿ ಸ್ತನದಿಂದಲಿ ಧರ್ಮ।
ಉದಸಿದ ಕಾರಣ ಗೋಳಕದಿಂದ ಶಬ್ದಗಳು।
ವಿಧಿ ಮೊದಲಾದ ದಿವತಿ ಕರ್ಣೇಂದ್ರಿಯದಲ್ಲಿ।
ಪದುಮ ಬಾಂಧವ ಚಂದ್ರ ಚಕ್ಷುರೇಂದ್ರಿಯದಲ್ಲಿ।
ಉದ ಶಿರರುದ್ವಯ ಈ ಗೋಳಕದಿಂದ।
ಹೃದಯ ನಿವಾಸ ಸಿರಿ ವಿಜಯವಿಟ್ಠಲರೇಯ।
ಸದಮಲ ಮೂರ್ತಿಯ ಸರ್ವದ ಕೊಂಡಾಡಿ ॥ ೧೬ ॥

ರೂಪಕ ತಾಳ

ನಾಸದಿಂದಲಿ ವೈದ್ಯರು ಪ್ರಸಾದದಿಂದ ಕಮ।
ಲಾಸನ ಕ್ರೋಧದಿಂದಲಿ ರುದ್ರ ಪುಟ್ಟಿದರು।
ನಾಶಿಕೇಂದ್ರಿಯದಿಂದ ಗಂಧ ದೇವಾನ್ನ ಮಾ।
ನಿಸಾನ್ನ ಪಕ್ಷದಿಂದಲಿ ಜನಿಸಿತು ನೋಡ।
ಶ್ವಾಸ ದಿಂದಲಿ ವಾಯು ಪ್ರೀತಿಯಲ್ಲಿ ಲಜ್ಜಾ।
ಹಾಸದಿಂದಲಿ ಮಾಯ ಲೋಭ ಔಷ್ಠದಿಂದ।
ಲೇಸು ಜಿಂಹ್ವೆಯಿಂದ ಉದಕೇಶ ಉದ್ಭವ।
ಆ ಸಮಸ್ತ ಮಧುರ ರಸ ಜಿಂಹ್ವೇಂದ್ರಿಯಲ್ಲಿ।
ಮಿಶೆಯಿಂದಲಿ ಮಿಂಚು ಮಕುಟದಿಂದಲಿ ಮೇಘ।



ಔಷಧಿ ಮಹಿರೂಪ ವನಸ್ಪಾತ್ಯಾದಿ ಸರ್ವ।
ಕೇಶದಿಂದಲಿ ಜನಿಸಿದವು ಕ್ರಮವಾಗಿ।
ವಾಸಲ ವೈಶ್ವಾನರ ವಾಕ್ಯದಿಂದಲಿ ಜನನ।
ಈಶ ವಂದಿತ ಪಾದ ವಿಜಯವಿಠ್ಠಲರೇಯ।
ವಾಸವಾಗಿಪ್ಪನು ಈ ಪರಿ ಧ್ಯಾನಿಸೆ ॥ ೧೭ ॥

ಅಟ್ಟತಾಳ

ಮನದಿಂದ ಬ್ರಹ್ಮ ಚಂದ್ರ ಮಿಕ್ಕಾದವರಯ್ಯ।
ಅನಿಲ ಸ್ವಯಂಭಾವ ಬುದ್ಧಿಯಿಂದ।
ಲಿ ನಾಡಿ ಗಣದಿಂದ ನದಿಗಳು ಅಸ್ಥಿಯಿಂದಲಿ ಅದ್ರಿ।
ಗುಣ ತ್ರಯಂಗಳು ವ್ಯಾಪಾರದಿಂದಲಿ ತಾರ।
ಗಣ ಪುಟ್ಟಿತು ನೋಡಾ ದಂತಗಳಿಂದ ವ।
ಚನದಿಂದ ಗಾಯತ್ರ್ಯಾದಿ ಛಂದಸ್ಸು ಕೇಳಿ।
ಘನಗಿರಿ ವಿಜ್ಞಾನ ಶಕ್ತಿನಾಮಕ ಬ್ರಹ್ಮ।
ಜನನವಾದನು ಅಂತಃಕರಣದಿಂದಲಿ ಅಂದು।
ಮನುಜ ಅಧರ್ಮ ಪೃಷ್ಠದಿಂದ ಉದುಭವ।
ಗುಣಿಸು ತ್ವಕಿಂದ ಪ್ರಾಣ ಇಂದ್ರಿಯದಿಂದ।
ಜನನ ವಾಯಿತು ಲೋಮ ಸ್ಪರಿಶ ಬಿಡದೆ ತಿಳಿ।
ತನುರೂಪಹ ಕೂಪದಿಂದಲಿ ಪ್ರಳಯೋದಕ।
ಎಣಿಸು ವೈದಿಕ ಲೌಕಿಕ ವ್ಯವಹಾರ।
ಜನಿಸಿದವು ನೋಡಾ ದೌಂಷ್ಟ್ರದ್ವಯದಿಂದ।
ವನಜನಾಭನ ರೂಪ ವಿರಾಟ ಮೂರ್ತಿಯ।
ತನುವಿನಿಂದಲಿ ಯಾವತ್ತು ಪುಟ್ಟಿತು।
ಮನುಜಾ ಎಣಿಕೆ ಮಾಡುವದಕ್ಕೆ
ಮನಕೆ ಅಗೋಚರ।
ಗಣಿತ ಮಾಡುವುದೇನೋ ಸರ್ವಾಂಗದಿಂದಲಿ।
ಜನನವಾದರು ಕೇಳಿ ಸರಿಸರಿ ಬಂದಂತೆ।
ಬಿನಗು ಜೀವರಿಗೆ ಈ ಪರಿ ಶಕ್ತಿಯುಂಟೆ।
ಗುಣನಿಧಿ ವಿಜಯವಿಟ್ಠಲರೇಯನ ವಿಗ್ರಹ।
ಅನುದಿನ ಧ್ಯಾನವ ಗೈಯ್ಯೋ ನಿರ್ಮಲನಾಗಿ ॥ ೧೮ ॥

ಆದಿತಾಳ

ಆಪಾದಮೌಳಿ ಪರಿಯಂತ ವಿರಾಟ ದ್ವಿ।
ರೂಪವನ್ನೆ ಧ್ಯಾನಿಸು ಎರಡೊಂದು ಬಗೆಯಲ್ಲಿ।
ಆಪಾರ ಜಡಜೀವ ಇದರೊಳಗಿಪ್ಪವೆಂದು।
ತಾಪಸ ಜನರಿಂದ ತಿಳಿದು ಅನಂತ ಜನುಮದ।
ಪಾಪೌಘ ಪೋಗಗಳೆದು ಪರಮ ಶುದ್ಧಾತ್ಮಕನಾಗಿ।
ತಾಪತ್ರಯ ತಂದೀವ ಅಹಂಭಾವವೆ ಬಿಟ್ಟು।
ಶ್ರೀ ಪತಿ ಶ್ರದ್ಧಪತಿ ಗತಿಯೆಂದು ನಂಬಿ ಜ್ಞಾನ।
ದೀಪ ಸಂಪಾದಿಸಿ ನಾನಾ ಪ್ರಕಾರದಿಂದ।
ರೂಪ ಕರ್ಮಕಾಲ ಗುಣ ಕರ್ಮ ದೇಹಾದಿಯೆ।
ವ್ಯಾಪಾರವೆಲ್ಲ ಹರಿಯ ಆಧೀನವೆಂದು ಚಿಂತಿಸಿ।
ಆಪದ್ಧರ್ಮ ರಕ್ಷಕ ಹರಿ ಸ್ವಾತಂತ್ರ ಪುರುಷ।
ಕೋಪ ದಾನವ ಭಂಗ ಸರ್ವದಾನಂದ ವಿಗ್ರಹ।
ಗೋಪಾಲ ಗುಣ ಪೂರ್ಣ ಪೂರ್ಣ ಜಗನ್ಮಂಗಳ ಮಂಗಳ ಪ್ರ।
ತಾಪ ಪ್ರಾಕೃತ ರಹಿತ ನಿರ್ದೋಷ ಮುಖ್ಯ ದೈವ।
ಈ ಪರಿಯಿಂದಲಿ ಪ್ರಾಣಾಧಿಷ್ಠಾನದಲಿ।
ವ್ಯಾಪುತನಾಗಿದ್ದ ಅನಾದಿ ಪುರುಷನ್ನ।
ರೂಪಾತಿಶಯಗಳನ್ನೆಲ್ಲ ನೆನದು ನೆನದು ಜಂಬು।
ದ್ವೀಪ ದಕ್ಷಿಣ ಭಾಗದಲ್ಲಿ ಸಾಧನ ಮಾಡು।
ಆಪತ್ತು ಎತ್ತವಯ್ಯ ಇಂತು ಏಕಾಂತ ಧ್ಯಾನ।
ಪೋಪಗೊಡದೆ ಮಹದೃಢ ತರದಲ್ಲಿ ಮಾಡೆ।
ಕೂಪಾಂಧವೆಂದೆಂಬೊ ಸಂಸಾರ ಉತ್ತರಿಪ।
ದ್ರೌಪದಿ ಪತಿ ಪ್ರೀಯ ವಿಜಯವಿಟ್ಠಲರೇಯನ।
ಆ ಪಾದ ಸೇರುವದಕ್ಕೆ ಇದೆ ಇದೆ ಉಪಾಯ ॥ ೧೯ ॥

ಜತೆ

ಪ್ರತಿ ಪ್ರತಿ ಪ್ರತೀಕಾಲದಲ್ಲಿ ಅಪ್ರತಿಹತನಾದ।
ಪತಿ ವಿಜಯವಿಟ್ಠಲ ವಿರಾಟ ಮೂರ್ತಿಯ ಧ್ಯಾನಿಸು ॥ ೨೦ ॥

(ಅಂತ್ಯಕಾಲದ ಚಿಂತನೆಗೆ ವಿಹಿತವಾಗಿರುವುದು ಶ್ರೀಹರಿಯ ವಿರಾಡ್ರೂಪದ ಚಿಂತನೆಯೇ ಹೊರತು ಕೇವಲ ಸ್ಮರಣೆಯಲ್ಲ. ಶ್ರೀಮದ್ಭಾಗವತದ ಶ್ಲೋಕಗಳಿಗೆ ವಿವರಣೆಯಂತಿರುವುದು ಈ ಸುಳಾದಿಯ ವೈಶಿಷ್ಟ್ಯ.)



# ಶ್ರೀಸತ್ಯಬೋಧತೀರ್ಥರು

## (೦೧.೦೩.೧೦ - ಶ್ರೀಸತ್ಯಬೋಧತೀರ್ಥರ ಆರಾಧನಾನಿಮಿತ್ತ ವಿಶೇಷಲೇಖನ)

– ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ವೈಷ್ಣವವೇದಾಂತದ ಇತಿಹಾಸದಲ್ಲಿ ಮಹಾತಪಸ್ವಿಗಳು ಎಂದು ಪ್ರಸಿದ್ಧರಾಗಿರುವ ಮಹನೀಯರಲ್ಲಿ ಶ್ರೀಸತ್ಯಬೋಧತೀರ್ಥರು ಒಬ್ಬರು. ಶ್ರೀಸತ್ಯಪ್ರಿಯತೀರ್ಥರ ಅನಂತರ ಶ್ರೀಮದುತ್ತರಾದಿಮಠದ ಪೀಠವನ್ನು ಸುಮಾರು ನಲವತ್ತು ವರ್ಷಗಳಷ್ಟು ದೀರ್ಘಕಾಲ ಅಲಂಕರಿಸಿದ್ದ ಮಹಾನುಭಾವರು ಇವರು.

ಇವರ ಜೀವನ ಮತ್ತು ಸಾಧನೆಗಳನ್ನು ತಿಳಿಸುವ ಮೂರು ಸಂಸ್ಕೃತಕಾವ್ಯಗಳು ಇಂದು ಉಪಲಬ್ಧವಿವೆ.

ಶ್ರೀಸತ್ಯಬೋಧವಿಜಯ : ಇದು ಶ್ರೀಸತ್ಯಬೋಧರ ಶಿಷ್ಯರೂ, ಮಹಾಕವಿಗಳೂ ಆದ ಶ್ರೀಕಂಚೀರಾಮಾಚಾರ್ಯಪುತ್ರ ಕೃಷ್ಣಾಚಾರ್ಯರಿಂದ ರಚಿತವಾದ ಮಹಾಕಾವ್ಯ; ಇಂದು ಇದರ ಇಪ್ಪತ್ತು ಸರ್ಗಗಳು ಉಪಲಬ್ಧವಿದ್ದು, ಅದಕ್ಕೆ ಸ್ವತಃ ಕೃತಿಕಾರರೇ ರಚಿಸಿರುವ ಸಂಸ್ಕೃತ ವ್ಯಾಖ್ಯಾನವೂ ಉಪಲಬ್ಧವಿದೆ.

**ಶ್ರೀಪೂರ್ಣಬೋಧಗುರುವಂಶಕಥಾಕಲ್ಪತರು:** ಇದು ಅವರ ಮತ್ತೊಬ್ಬ ಪ್ರಿಯಶಿಷ್ಯರಾದ ಬಿಜಾಪುರದ ದೈವಜ್ಞಭೀಮಾಚಾರ್ಯರಿಂದ ರಚಿತವಾದ ೩೩ ಸರ್ಗಗಳ ಕಾವ್ಯ. ಇದರ ಮೊದಲು ಇಪ್ಪತ್ತನಾಲ್ಕು ಸರ್ಗಗಳಲ್ಲಿ ಶ್ರೀಮಧ್ವಾಚಾರ್ಯರಿಂದ ಆರಂಭಿಸಿ ಶ್ರೀಸತ್ಯಪ್ರಿಯರವರೆಗಿನ ಎಲ್ಲ ಉತ್ತರಾದಿಮಠದ ಶ್ರೀಗಳ ಚರಿತ್ರೆಯೂ, ಅನಂತರದ ೯ ಸರ್ಗಗಳಲ್ಲಿ ಶ್ರೀಸತ್ಯಬೋಧಶ್ರೀಗಳ ಚರಿತ್ರೆಯೂ ನಿರೂಪಿತವಾಗಿದೆ. ಇವರು ಶ್ರೀಸತ್ಯಬೋಧರ ಮೇಲೆ ಇನ್ನೂ ಕೆಲವು ಸ್ತೋತ್ರಕೃತಿಗಳನ್ನೂ ರಚಿಸಿರುವರು (ಇವೆಲ್ಲ ನನ್ನ ಸಂಗ್ರಹದಲ್ಲಿ ಉಪಲಬ್ಧವಿವೆ).

ಶ್ರೀಗುರುವಂಶಾವಲೀ : ಇದು ಶ್ರೀಸತ್ಯಬೋಧವಿಜಯದ ಕರ್ತೃಗಳಾದ ಶ್ರೀ ಕಂಚೀಕೃಷ್ಣಾಚಾರ್ಯರ ಪುತ್ರರಾದ ಶ್ರೀಕಂಚೀರಾಮಾಚಾರ್ಯರ ಕೃತಿ. ಇದರಲ್ಲಿ ಒಟ್ಟು ಐದು ಸರ್ಗಗಳಿವೆ; ಇದರಲ್ಲಿನ ಒಟ್ಟು ಶ್ಲೋಕಗಳ ಸಂಖ್ಯೆ ೩೦೭.

ಒಬ್ಬ ಪೀಠಾಧೀಶರ ಮೇಲೆ ಹೀಗೆ ಸಮಕಾಲಿಕರೇ ಆದ ಮೂವರು ಮಹನೀಯರಿಂದ ಕೃತಿಗಳು ರಚಿತವಾಗಿರುವ ನಿದರ್ಶನ ತುಂಬಾ ಕಡಿಮೆ; ಅವರ ದೀರ್ಘಕಾಲದ ಪೀಠಾ-ಧಿಪತ್ಯದಂತೆ ಇದೂ ಅವರ ವಿಶಿಷ್ಟ ಮಹಾತ್ಮ್ಯಕ್ಕೆ ದ್ಯೋತಕ.

ರಾಯಚೂರಿನ ಶ್ರೀಹರಿಯಾಚಾರ್ಯರ ಪುತ್ರರಾದ ಇವರು ವಿಶಿಷ್ಟರೀತಿಯಲ್ಲಿ ಶ್ರೀಹರಿಯ ಸೇವೆ ಮಾಡಿದರು; ತಂದೆಯ ದ್ವಿತೀಯಪತ್ನಿಯಲ್ಲಿ ಜನಿಸಿದ ಇವರು

ಮನೆತನದಲ್ಲೇ 'ಅದ್ವಿತೀಯ'ರೆನ್ನಿಸಿದರು, 'ರಾಮಾಚಾರ್ಯ' ಎಂಬ ಪೂರ್ವಾಶ್ರಮ ನಾಮಕ್ಕೆ ತಕ್ಕಂತೆ ಶ್ರೀಸೀತಾರಾಮದೇವರನ್ನು ಪೂಜಿಸಿದರು. ಗುಂಡುಮೆಟ್ಟಿ ಕಲ್ಲೂರಿನಲ್ಲಿ ಒದಗಿದ ಪ್ರಥಮದರ್ಶನದಿಂದಲೇ ಶ್ರೀಸತ್ಯಪ್ರಿಯರಿಗೆ ಪ್ರಿಯರೆನ್ನಿಸಿ ಅವರ ವಿದ್ಯಾಶಿಷ್ಯರೂ, ಆಶ್ರಮಶಿಷ್ಯರೂ ಆಗಿ ಶ್ರೀಹರಿವಾಯುಗಳಿಗೆ ಪ್ರಿಯರೆನ್ನಿಸುವ ಅಪೂರ್ವ ಕಾರ್ಯಗಳನ್ನು ತಮ್ಮ ಜೀವನದುದ್ದಕ್ಕೂ ಮಾಡಿದರು. ಸಂನ್ಯಾಸಸ್ವೀಕಾರಕ್ಕಿಂತ ಮುಂಚಿತವಾಗಿ ಗುರು ಶ್ರೀಸತ್ಯಪ್ರಿಯರೊಂದಿಗೆ ಉಡುಪಿಯಲ್ಲಿ ಶ್ರೀಕೃಷ್ಣನನ್ನೂ, ಕೊಲ್ಹಾಪುರದಲ್ಲಿ ಮಹಾಲಕ್ಷ್ಮಿಯನ್ನೂ ಸಂದರ್ಶಿಸಿ ಧನ್ಯರೆನಿಸಿದ್ದರು.

ಪೀಠವೇರಿದ ದಿನದಿಂದ ಒಂದಲ್ಲ ಒಂದು ರೀತಿಯಲ್ಲಿ ಅನೇಕ ತೆರನಾದ ಪ್ರತಿಕೂಲ ಪರಿಸ್ಥಿತಿ ಎದುರಾದರೂ ಧೃತಿಗೆಡದೆ, ಎಲ್ಲವನ್ನು ಶ್ರೀಹರಿವಾಯುಗುರುಗಳನ್ನು ನಂಬಿಯೇ ಯಶಸ್ವಿಯಾಗಿ ಎದುರಿಸಿದ ವಿಖ್ಯಾತಿ ಇವರದು. ಸವಣೂರಿನ ನವಾಬನೇ ಮೊದಲಾದ ಅನೇಕ ವಿಧರ್ಮೀಯ ರಾಜರೂ ಸಹ ಇವರ ಮಹಿಮೆಯನ್ನು ಕಂಡು ಬೆರಗಾಗಿದ್ದರು ಮತ್ತು ತಪಃಶಕ್ತಿಗೆ ಶರಣಾಗಿದ್ದರು. ಸವಣೂರಿನ ದಿವಾನ ಖಂಡೇರಾಯ ಇವರಿಗೆ ದಾಸಾನುದಾಸನಾಗಿಬಿಟ್ಟಿದ್ದ. ಮಠವೆಂದರೆ ವಿದ್ಯಾಕೇಂದ್ರ ('ಮಠಃ ಛಾತ್ರಾದಿನಿಲಯಃ') ಎಂಬ ಮಾತನ್ನು ತಮ್ಮ ಸಮರ್ಥ ಪಾಠಪ್ರವಚನಗಳಿಂದ ಸಾರ್ಥಕಗೊಳಿಸಿದ ಇವರ ಅಪಾರವೈದುಷ್ಯ ಇತಿಹಾಸದ ದಾಖಲೆಗಳಲ್ಲೊಂದು; ಇವರ ಅನಂತರ ಕ್ರಮವಾಗಿ ಪೀಠವನ್ನಲಂಕರಿಸಿದ್ದ ಶ್ರೀಸತ್ಯಸಂಧತೀರ್ಥರು, ಶ್ರೀಸತ್ಯವರತೀರ್ಥರು, ಶ್ರೀಸತ್ಯಧರ್ಮ-ತೀರ್ಥರು ಮತ್ತು ಶ್ರೀಸತ್ಯಸಂಕಲ್ಪತೀರ್ಥರು ಇವರ ಪಾಠದ ಗರಡಿಯಲ್ಲೇ ತಯಾರಾದವರು; ಭರತಖಂಡದ ಉದ್ದಗಲಕ್ಕೂ ವ್ಯಾಪಕವಾಗಿ ಸಂಚರಿಸಿ **'ವಿಷ್ಣೋಃ ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ'** ಎಂಬ ಶ್ರೀಮಧ್ವಾಚಾರ್ಯರ ಆದೇಶವನ್ನು ಜೀವನದುದ್ದಕ್ಕೂ ಪಾಲಿಸಿದ್ದು ಇವರ ಸಾಧನೆ.

ರಾಮೇಶ್ವರ, ರಾಮನಾಥಪುರ, ತಿರುಚಿನಾಪಳ್ಳಿ, ತಂಜಾವೂರು, ಕುಂಭಕೋಣ, ನಾಚಾರಗುಡಿ, ಶ್ರೀಮುಷ್ಣ , ಆರಣಿ, ಆರ್ಕಾಟ್, ಕನ್ಯಾಕುಮಾರಿ, ಶ್ರೀರಂಗ, ತಿರುಪತಿ, ಕಡಪ, ಹೈದರಾಬಾದ್, ಗುಲ್ಬರ್ಗಾ, ರಾಯಚೂರು, ಸುರಪುರ, ಗಜೇಂದ್ರಗಡ, ಬಳ್ಳಾರಿ, ರಾಯದುರ್ಗ, ಚಿತ್ರದುರ್ಗ, ಹರಿಹರ ಮೊದಲಾದವುಗಳು ಶ್ರೀಗಳು ಸಂಚರಿಸಿದ ಕೆಲವು ಮುಖ್ಯಸ್ಥಳಗಳು. ಸವಣೂರು ಅವರ ಮುಖ್ಯಕಾರ್ಯಕ್ಷೇತ್ರವಾಗಿತ್ತು. ಅವರು ಸವಣೂರನ್ನು ಪ್ರವೇಶಿಸಿದ್ದು ಸರ್ವಜಿತ್ ಸಂವತ್ಸರದ ಆಷಾಢ ಶುದ್ಧ ನವಮಿಯಂದು (೧೭೬೭ A.D.) ಎಂದು ಪೂರ್ಣಬೋಧಗುರುವಂಶಕಥಾಕಲ್ಪತರು ಗ್ರಂಥದಲ್ಲಿ ಉಲ್ಲೇಖ ಉಂಟು.

ಅನೇಕ ದುರ್ವಾದಿಗಳನ್ನು ಜಯಿಸಿ ದ್ವೈತದುಂದುಭಿಯನ್ನು ಎಲ್ಲೆಡೆಗಳಲ್ಲೂ ಮೊಳಗಿಸಿದ ಜ್ಞಾನಿವರೇಣ್ಯರು ಎಂಬುದು ಇವರ ಹಿರಿಮೆಯ ಮತ್ತೊಂದು ಮುಖ.



ತಂಜಾವೂರಿನ ಸೇತುಗೋಸ್ವಾಮಿ ಮತ್ತು ಅವನ ಮಿತ್ರ ಸ್ವಾಮಿಶಾಸ್ತ್ರಿ ಮೊದಲಾದವರು ಶ್ರೀಗಳಿಂದ ಪರಾಭವಗೊಂಡ ವಾದಿಗಳಲ್ಲಿ ಪ್ರಮುಖರು. ತಂಜಾವೂರಿನಲ್ಲಿ ಇವರು ಮಾಡಿದ ವೇದಪಠಣ ಮತ್ತು 'ಸಖ್ಯೇ ತ ಇಂದ್ರ ವಾಜಿನ' (ಋಗ್ವೇದ I, II,೨) ಎಂಬ ಮಂತ್ರಕ್ಕೆ ನೀಡಿದ ಶ್ರೀಮಧ್ವಋಗ್ಭಾಷ್ಯಾನುಸಾರಿಯಾದ ಅರ್ಥ ವಿವರಣೆ ಅಂದಿನ ಕಾಲದ ಆಶ್ಚರ್ಯಗಳಲ್ಲೊಂದಾಗಿತ್ತು ಎಂದು ಸತ್ಯಬೋಧವಿಜಯದಲ್ಲಿ ವರ್ಣನೆಯಿದೆ. ಕುಂಭಕೋಣದಲ್ಲಿ 'ಅಥೈತಯೋಃ ಪರ್ಥೋರ್ನ್ಯೆಕತರೇಣ ಚನ' ಎಂಬ ಶ್ರುತಿವಾಕ್ಯದಲ್ಲಿ 'ಚನ' ಎಂಬ ಪಾಠವೇ ಶ್ರೀರಘೂತ್ತಮರ ಭಾವಬೋಧಕ್ಕೆ ಸಮ್ಮತವಾದ ಪಾಠ ಎಂದು ವಿದ್ವತ್ಸಭೆಯಲ್ಲಿ ಸಾಧಿಸಿದ್ದು ಇವರ ಅಪಾರ ವೇದವೈದುಷ್ಯದ ಮತ್ತೊಂದು ಮುಖ.

ವಿದ್ವತ್ಪಕ್ಷಪಾತ ಮತ್ತು ಅಪಾರ ಔದಾರ್ಯಗಳು ಸಹ ಶ್ರೀಸತ್ಯಬೋಧರಲ್ಲಿ ಎದ್ದು ಕಾಣುತ್ತಿದ್ದ ಗುಣಗಳಾಗಿದ್ದವು. ಅದರಿಂದಾಗಿ ಅವರ ಬಳಿ ವಿದ್ವದ್ವೃಂದ ಸದಾ ನೆರೆದಿರುತ್ತಿತ್ತು; ವಿದ್ಯಾರ್ಥಿಗಳು ತುಂಬಿರುತ್ತಿದ್ದರು; ಕೃಷ್ಣಾತೀರದ ಗಲಗಲೀ ಮುದ್ಗಲಾ-ಚಾರ್ಯರು, ಗಾರ್ಲಪಾಡ ಶ್ರೀನಿವಾಸಾಚಾರ್ಯರು, ಪಾಂಡುರಂಗಿ ನೃಸಿಂಹಾಚಾರ್ಯರು, ಮನ್ನಾರೀ ಶ್ರೀನಿವಾಸಾಚಾರ್ಯರು, ಬಂಕಾಪುರದ ರಾಮಚಂದ್ರಾಚಾರ್ಯರು, ಶ್ರೀ ಸತ್ಯನಾಥತೀರ್ಥರ ವಂಶಜರಾದ ರಘುನಾಥಾಚಾರ್ಯರು, ಯದುಪತ್ಯಾಚಾರ್ಯರ ವಂಶದ ಶ್ರೀಪತ್ಯಾಚಾರ್ಯರು ಮತ್ತು ಉಮರ್ಜೀ ಕೃಷ್ಣಾಚಾರ್ಯರು ಮೊದಲಾದ ಆ ಕಾಲದ ಪ್ರಮುಖವಿದ್ವಾಂಸರೆಲ್ಲ ಶ್ರೀಗಳವರಲ್ಲಿ ಬದ್ಧಾದರರಾಗಿದ್ದರು. ಶ್ರೀಗಳ ಗೃಹಸ್ಥಶಿಷ್ಯರಲೊಬ್ಬರಾದ ತಿರುಪತಿ ನರಸಿಂಹಾಚಾರ್ಯರೆಂಬುವರು 'ಸರ್ವಸಮರ್ಪಣ-ವಿಧಿ' ಎಂಬ ೧೫೬ ಶ್ಲೋಕಗಳ ಕೃತಿಯನ್ನು ರಚಿಸಿರುವರು.

ಆ ಕಾಲದ ಪ್ರಸಿದ್ಧ ಹರಿದಾಸರಾದ ಶ್ರೀವಿಜಯದಾಸರು, ಶ್ರೀಗೋಪಾಲದಾಸರು (ಮತ್ತು ಅವರ ಸೋದರರು), ಮೋಹನದಾಸರು ಮತ್ತು ಶ್ರೀಜಗನ್ನಾಥದಾಸರು ಶ್ರೀಗಳವರ ಮಾಹಾತ್ಮ್ಯವನ್ನು ತಮ್ಮ ಕೃತಿಗಳಲ್ಲಿ ವರ್ಣಿಸಿರುವರು. ಶ್ರೀಗೋಪಾಲದಾಸರು ಮತ್ತು ಅವರ ಸೋದರರು ಶ್ರೀಗಳನ್ನು ಕಂಡು ಒಬ್ಬೊಬ್ಬರು ಒಂದೊಂದು ನುಡಿಯಂತೆ ಪ್ರತ್ಯೇಕವಾಗಿ ತಕ್ಷಣ ರಚಿಸಿದ 'ಮಾರಮದ ಘನ್ನ ಸಮ್ಮೀರ ಮಧ್ವಮತೋದ್ಧಾರ' ಎಂಬ ದೇವರ ನಾಮ ತುಂಬಾ ಪ್ರಸಿದ್ಧಿಯಲ್ಲಿದೆ.

ಶ್ರೀಜಗನ್ನಾಥದಾಸರು ಶ್ರೀಗಳಿಗೆ ಸಮರ್ಪಿಸಿದ ಒಂದು ಮಂತ್ರಾಕ್ಷತೆ ತಟ್ಟೆಯು ಇಂದಿಗೂ ಸವಣೂರಿನ ವೃಂದಾವನ ಸನ್ನಿಧಾನದಲ್ಲಿದೆ. ಇವರು ಶ್ರೀಜಗನ್ನಾಥದಾಸರಿಗೆ ಅನುಗ್ರಹಿಸಿದ ಮಂತ್ರಾಕ್ಷತೆ ತಟ್ಟೆ ಮತ್ತು ಒರಗುಮಣೆಗಳು ಮಾನ್ವಿಯಲ್ಲಿ ಇಂದೂ ಇವೆ. ಅಲ್ಲದೆ ಶ್ರೀಜಗನ್ನಾಥದಾಸರ 'ಮೇರುಕೃತಿ'ಯಾದ ಶ್ರೀಹರಿಕಥಾಮೃತಸಾರದ ಕೆಲವು ಭಾಗಗಳ ರಚನೆಯೂ ಶ್ರೀಗಳ ಸನ್ನಿಧಾನದಲ್ಲೇ ಆಯಿತೆಂಬ ಪ್ರತೀತಿಯೂ ಉಂಟು.

ಒಟ್ಟಿನಲ್ಲಿ 'ಹರಿದಾಸಸಾಹಿತ್ಯ'ದ ವಿಶೇಷ ಪ್ರಸಾರದಲ್ಲೂ ಶ್ರೀಸತ್ಯಬೋಧರ ಪಾತ್ರ ಗಮನಾರ್ಹ ಎನ್ನಲು ಇವೆಲ್ಲ ಸಾಕ್ಷಿಯಾಗಿವೆ.

ಶ್ರೀರಾಘವೇಂದ್ರಮಠದ ಶ್ರೀವರದೇಂದ್ರತೀರ್ಥರು ಮತ್ತು ಶ್ರೀಧೀರೇಂದ್ರತೀರ್ಥರು, ಇವರಲ್ಲಿ ಆದರ ಹೊಂದಿದ್ದರೆನ್ನಲು ಆಧಾರಗಳಿವೆ; ಶ್ರೀವ್ಯಾಸತತ್ತ್ವಜ್ಞತೀರ್ಥರು ಮತ್ತು ಮಾದನೂರಿನ ವಿಷ್ಣುತೀರ್ಥರು (ಪೂರ್ವಾಶ್ರಮ) ಶ್ರೀಗಳಲ್ಲಿ ಅಪಾರ ಗೌರವ ಹೊಂದಿದ್ದರು.

ಇವರ ಹಿರಿಮೆಯನ್ನು ಸಹಿಸದ ಕೆಲವು ದುಷ್ಟರು ಆಹಾರದಲ್ಲಿ ವಿಷವನ್ನು ಬೆರೆಸಿದಾಗ, ಅದನ್ನೇ ತಿಂದು ಜೀರ್ಣಿಸಿಕೊಂಡ ಇವರ ಅಮೋಘ ತಪಃಶಕ್ತಿ ಆಸ್ತಿಕರ ಮನೆ ಮಾತಾಗಿದೆ. ವಿಷಯ ಸಂಗರ್ಜಿತರಾದ ಇವರಿಗೆ ವಿಷದ ಸಂಗ ಏನನ್ನೂ ಮಾಡಲಿಲ್ಲ ಎಂಬುದು ಆಶ್ಚರ್ಯದ ವಿಷಯವೇನೂ ಅಲ್ಲ; ಹರಿಗರ್ಪಿತವೆಂಬ ಕಾರಣದಿಂದ ವಿಷಮಿಶ್ರಿತ ಆಹಾರವನ್ನೂ ತಿಂದ ಇವರ ವೈಷ್ಣವದೀಕ್ಷೆ ಇವರ ಮೇಲಿನ ಶ್ರೀವಾಯುದೇವರ ವಿಶೇಷಾನುಗ್ರಹಕ್ಕೆ ಸೂಚಕವಾಗಿದೆ.

ಮಧ್ಯರಾತ್ರಿಯಲ್ಲಿ ಸೂರ್ಯನನ್ನು ತೋರಿಸಿದ ಇವರ ಅಪೂರ್ವ ಮಹಿಮೆಯು (ನೈವೇದ್ಯಗವಿಷಂ ರಾಮೇ ವೀಕ್ಷ್ಯ ತದ್ಭುಕ್ತಿಭಾಗ್ಗುರುಃ। ಯೋಽದರ್ಶಯದ್ರವಿಂ ರಾತ್ರೌ ಶ್ರೀಸತ್ಯಬೋಧೋಽಸ್ತು ಮೇ ಮುದೇ ॥) ಒಂದು ರೀತಿಯಲ್ಲಿ ''**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।**'' ಎಂಬ ಭಗವದ್ಗೀತೆಯ ಮಾತಿಗೆ ಉಜ್ಜ್ವಲನಿದರ್ಶನವಾಗಿದೆ. ಕಲಿಯುಗದಂತಹ ಅಜ್ಞಾನಪ್ರಚುರಯುಗದಲ್ಲೂ ತತ್ತ್ವಜ್ಞಾನಸೂರ್ಯನನ್ನು ಜ್ಞಾನಿಗಳು ಹೇಗೆ ತೋರಿಸಬಲ್ಲರು ಎಂಬುದಕ್ಕೆ ಇದು ದ್ಯೋತಕವೂ ಆಗಿದೆ. ರಾತ್ರಿಯನ್ನು ಹಗಲಾಗಿಸಿದ ಪ್ರಿಯವ್ರತರಾಜನ ಕಥೆಯನ್ನು ಜ್ಞಾಪಿಸುವ ಇವರ ಈ ಮಹಿಮೆಯು ಇವರು ಅದೆಂತಹ ಭಾಗವತಶಿರೋಮಣಿಗಳಾಗಿದ್ದರು ಎಂಬುದಕ್ಕೂ ಗಮಕ.

ಶ್ರೀಮಧ್ವಸರೋವರಕ್ಕೆ ಭಾಗೀರಥಿಯು ಆಗಮಿಸಿದ ಮಹಿಮೆಯನ್ನು ಸ್ಮರಣೆಗೆ ತಂದು ಕೊಡುವ, ಇವರಿಗಾಗಿ ಸವಣೂರಿನ ತೋಟದಲ್ಲಿನ ಬಾವಿಗೆ ಗಂಗೆಯು ಆಗಮಿಸಿದ ಮಹಿಮೆಯು ಇವರ ಮೇಲಿದ್ದ ಶ್ರೀಮಧ್ವಾಚಾರ್ಯರ ವಿಶೇಷಾನುಗ್ರಹವನ್ನು ಸೂಚಿಸುತ್ತದೆ. ಸದಾ ವಿಷ್ಣುಪದರತರಾದ ಇವರ ಬಳಿಗೆ ವಿಷ್ಣುಪದಿಯು ಆಗಮಿಸಿದ್ದ ಆ ತೀರ್ಥವು ಇಂದೂ 'ವಿಷ್ಣುತೀರ್ಥ'ವೆಂದು ಪ್ರಸಿದ್ಧವಿದೆ. ಅಭಿಮಂತ್ರಿತಜಲದಿಂದ ತಮ್ಮ ಶಿಷ್ಯರಾದ ಶ್ರೀಸತ್ಯಸಂಧತೀರ್ಥರಿಗೆ ಹತ್ತು ವರ್ಷಗಳಷ್ಟು ಆಯುಷ್ಯವನ್ನು ಅನುಗ್ರಹಿಸಿದರೆಂಬುದು ಇವರ ಮತ್ತೊಂದು ಮಹಿಮೆ.



ಇವರ ಗ್ರಂಥರಚನೆಯ ಬಗ್ಗೆ ಹೆಚ್ಚು ವಿಷಯಗಳು ಬೆಳಕಿಗೆ ಬಂದಿಲ್ಲ; 'ಯತ್ರ ತ್ವಸ್ಯಾತ್ಮೈ ವಾಭೂತ್' ಎಂಬ ಬೃಹದಾರಣ್ಯಕ ಉಪನಿಷತ್ತಿನ ವಾಕ್ಯಕ್ಕೆ ಅನುವ್ಯಾಖ್ಯಾನೋಕ್ತ ರೀತಿಯಲ್ಲಿ ದ್ವೈತಪರ ಅರ್ಥವನ್ನು ಪ್ರತಿಪಾದಿಸುವ ಇವರ ಕೃತಿಯೊಂದು ಉಪಲಬ್ಧವಿದೆ. ಅದರ ೧೮ ಶ್ಲೋಕಗಳನ್ನು ಸತ್ಯಬೋಧವಿಜಯಕೃತಿಯ ಅನುವಾದ (VOL.iv)ದ ಪರಿಶಿಷ್ಟದಲ್ಲಿ ಕೊಟ್ಟಿರುವರು, 'ಅಜಾದಿ ಮಾತೃಕಾ ಮಂತ್ರಾರ್ಥ' ಮತ್ತು 'ಪುರುಷಸೂಕ್ತ-ಮಂತ್ರಾರ್ಥ'ಗಳನ್ನು ನಿರೂಪಿಸುವ ಮತ್ತೊಂದು ಪುಟ್ಟ ಕೃತಿಯು ಸಹ 'ಶ್ರೀಸತ್ಯಬೋಧಗುರುರಾಜೀಯ' ಎಂಬುದಾಗಿ ನನ್ನ ಸಂಗ್ರಹ(ಶ್ರೀ ಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ, ವ್ಯಾಸನಕೆರೆ)ದಲ್ಲಿ ದೊರಕಿದೆ.

ಒಂದು ಬದಿಯಲ್ಲಿ ತಮ್ಮ ಚಿತ್ರ ಮತ್ತು 'ಸತ್ಯಬೋಧಗುರುರಾಜ' ಎಂದೂ, ಇನ್ನೊಂದು ಬದಿಯಲ್ಲಿ 'ಗುರುರಾಜೋ ವಿಜಯತೇ' ಎಂದೂ ಕೆತ್ತಲ್ಪಟ್ಟ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ತಮ್ಮದೇ ಟಂಕಸಾಲೆಯಲ್ಲಿ ಅಚ್ಚು ಹಾಕಿಸಿ, ಚಲಾವಣೆಗೆ ತಂದಿದ್ದೂ ಶ್ರೀಸತ್ಯಬೋಧರ ಮತ್ತೊಂದು ವೈಶಿಷ್ಟ್ಯ. ತಮ್ಮ ವರ್ಚಸ್ಸಿನಿಂದ ಆಗ ನಡೆಯಲಿದ್ದ ಅನೇಕ ಯುದ್ಧಗಳನ್ನು ನಿಲ್ಲಿಸಿ ಶಾಂತಿಯನ್ನು ಸ್ಥಾಪಿಸಿದ್ದು ಇವರ ಮತ್ತೊಂದು ಸಾಧನೆ. ಶ್ರೀಮುಷ್ಣಕ್ಷೇತ್ರದಲ್ಲಿ ಲಕ್ಷ ತುಳಸಿ ಮತ್ತು ಲಕ್ಷಪುಷ್ಪಗಳಿಂದ ಶ್ರೀವರಾಹದೇವರನ್ನು ಅರ್ಚಿಸಿದರು. ಅಪುತ್ರರಿಗೆ ಸಂತತಿಯನ್ನು ಕರುಣಿಸಿದ್ದು, ಘಟಸರ್ಪದ ಬಾಧೆಯಿಂದ ಆಸ್ತಿಕ ಶ್ರೀಮಂತನೊಬ್ಬನನ್ನು ಉದ್ಧರಿಸಿದ್ದು ಮೊದಲಾದ ಅನೇಕ ಮಹಿಮೆಗಳು ಇವರ ಬಗ್ಗೆ ಪ್ರಚಲಿತವಿವೆ.

ಸವಣೂರಿನ ಮಠದಲ್ಲಿ ಅಹೋಬಲ ನರಸಿಂಹದೇವರು ಮತ್ತು ತ್ರಿವಿಕ್ರಮದೇವರನ್ನು, ಪ್ರಾಣದೇವರನ್ನು ಪ್ರತಿಷ್ಠಾಪಿಸಿದ್ದು, ಸಾಧ್ಯಾಮೃತವೆಂಬ ಸರೋವರವನ್ನು ನಿರ್ಮಿಸಿದ್ದೂ ಇವರೇ. ಚಿತ್ರದುರ್ಗ, ಮದ್ರಾಸ್ ಮೊದಲಾದ ಅನೇಕ ಕಡೆಗಳಲ್ಲಿ ಶ್ರೀಪ್ರಾಣದೇವರನ್ನೂ ಪ್ರತಿಷ್ಠಾಪಿಸಿರುವರು. ಸವಣೂರಿನ ಮಠದಲ್ಲಿ ಬೃಂದಾವನದ ಎದುರಿಗಿರುವ ಸ್ಥಳವು ಅವರು ಶ್ರೀಮೂಲರಾಮದೇವರನ್ನು ಪೂಜಿಸುತ್ತಿದ್ದ ಸ್ಥಳವೆಂಬುದಾಗಿಯೂ, ಮಠದ ಪ್ರವೇಶ ದ್ವಾರ ಬಳಿ ಇರುವ ಕಂಭವು ಅವರು ಪ್ರತಿನಿತ್ಯ ಪಾಠಪ್ರವಚನ ಮಾಡುತ್ತಿದ್ದ ಸ್ಥಳವೆಂದೂ ಪ್ರಸಿದ್ಧಿಯಿದೆ. ಬೃಂದಾವನದ ಬಳಿ ಖಂಡೇರಾಯನಿಗಾಗಿ ಸಿದ್ಧಪಡಿಸಿದ ಇವರ ಒಂದು ಶಿಲಾ ವಿಗ್ರಹವೂ ಮತ್ತು ಖಂಡೇರಾಯನ ಒಂದು ಶಿಲಾ ವಿಗ್ರಹವೂ ಇವೆ.

ಇವರ ಕಾಲಕ್ಕೆ ಶ್ರೀಮದುತ್ತರಾದಿಮಠವು 'ಶ್ರೀಸತ್ಯಬೋಧಮಠ'ವೆಂದೇ ಪ್ರಸಿದ್ಧವಾಗಿದ್ದಂತೆಯೂ ದಾಖಲೆಗಳು ದೊರೆಯುತ್ತವೆ. (Dharwad District Gazetter Part III Page 58 - 1886 A.D.)

*****

# ಶ್ರೀಲಕ್ಷ್ಮೀನಾರಾಯಣಾಚಾರ್ಯರ

# ದಶಾವತಾರಮಾಲಿಕಾ

**– ಸಂಪಾದನೆ, ವಿವರಣೆ: ಡಾ ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**

ಶ್ರೀಲಕ್ಷ್ಮೀನಾರಾಯಣಾಚಾರ್ಯರು ಶ್ರೀರಾಘವೇಂದ್ರಸ್ವಾಮಿಗಳ ಪೂರ್ವಾಶ್ರಮದ ಏಕಮಾತ್ರಪುತ್ರರು. ಶ್ರೀಸುಧೀಂದ್ರರು ಸನ್ಯಾಸ ನೀಡಲು ಬಯಸಿದಾಗ ಅದಕ್ಕೆ ಕೂಡಲೇ ಒಪ್ಪದೆ, 'ಬಾಲಕೋ ನೋಪನೀತಃ – ನನ್ನ ಮಗನಿಗಿನ್ನೂ ಉಪನಯನ ಪೂರೈಸಿಲ್ಲ' ಎಂದು ನುಡಿದದ್ದು ಇವರ ಬಗ್ಗೆಯೇ. ಮುಂದೆ ಗುರುಗಳ ಸನ್ನಿಧಿಯಲ್ಲಿಯೇ ಉಪನಯನವನ್ನೂ ಪೂರೈಸಿ, ಸನ್ಯಾಸದೀಕ್ಷೆ ಸ್ವೀಕರಿಸಿ, 'ಶ್ರೀರಾಘವೇಂದ್ರರು' ಎಂದು ವೇಂಕಟನಾಥರು ವಿಖ್ಯಾತರಾದರು. ಮಗನಿಗೆ ಉಪನಯನವನ್ನು ಮಾತ್ರವಲ್ಲದೆ, ಸಾಂಗಶಾಸ್ತ್ರಾಧ್ಯಯನವನ್ನೂ ಮಾಡಿಸಿ, ಮಹಾವಿದ್ವಾಂಸನನ್ನಾಗಿ ರೂಪಿಸಿದ್ದು ಶ್ರೀರಾಘವೇಂದ್ರರ ಅಪೂರ್ವಸಾಧನೆಗಳಲ್ಲೊಂದು. ಈ ಕಾರಣಕ್ಕಾಗಿಯೂ ಶ್ರೀರಾಘವೇಂದ್ರರು ಪೂಜ್ಯರೆನ್ನಿಸುವರು. ಇವರು ಶ್ರೀರಾಘವೇಂದ್ರರನ್ನು ತಮ್ಮ ವಿದ್ಯಾಗುರುಗಳೆಂದೇ ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿರುವರು. ಗುರುಗುಣಸ್ತವನದಲ್ಲಿ ಇವರ ಬಗ್ಗೆ ಬಂದಿರುವ ಉಲ್ಲೇಖ ಅತ್ಯಂತ ಅಪೂರ್ವವಾದುದು:

**ಲಕ್ಷ್ಮೀನಾರಾಯಣಾರ್ಯಸ್ತವ ತನಯಮಣಿಃ ಸತ್ಸು ಸರ್ವೇಷು ಧನ್ಯೋ**
**ಯಸ್ಮಾದೃಗ್ಭಾಷ್ಯಟೀಕಾಽತನುತರವಿವೃತೇರಂಜಸಾ ತತ್ಕೃತಾಯಾಃ ।**
**ಪ್ರೇಮ್ಣಾ ವಿದ್ವತ್ಸು ಭೂಯಃ ಪ್ರಚಯಮಭಿಲಷನ್ ರಾಘವೇಂದ್ರ ವ್ರತೀಂದ್ರ**
**ಪ್ರಾವೋಚಸ್ತ್ವಂ ಪ್ರತೀತವ್ರತ ನಿಚಯಮೃಚಾಮೇವ ಭಾಷ್ಯಾನುರೋಧಾತ್ ॥**

**- (ಶ್ಲೋಕ ೨೮)**

ಶ್ರೀಲಕ್ಷ್ಮೀನಾರಾಯಣಾಚಾರ್ಯರು ಶ್ರೇಷ್ಠ ಪಾಠಪ್ರವಚನಕಾರರಾದಂತೆ ಉದ್ಗ್ರಂಥ-ಕಾರರೂ ಆದರು. ಅವರು ಶ್ರೀಜಯತೀರ್ಥರ ಋಗ್ಭಾಷ್ಯಟೀಕಾಸಂಬಂಧದೀಪಿಕೆಗೆ ರಚಿಸಿರುವ ಟಿಪ್ಪಣಿ ಶ್ರೇಷ್ಠಕೃತಿಗಳಲ್ಲೊಂದು. ಅದು ಅನೇಕ ಗ್ರಂಥಾಗಾರಗಳಲ್ಲಿ ಉಪಲಬ್ಧವಿದ್ದರೂ ಇನ್ನೂ ಅಪ್ರಕಟಿತವಾಗಿಯೇ ಉಳಿದಿರುವದು ಅತ್ಯಂತ ವಿಷಾದಕರಸಂಗತಿ. ಗ್ರಂಥಸಂಗ್ರಹ, ಗ್ರಂಥಸಂರಕ್ಷಣೆ, ಗ್ರಂಥಪ್ರಕಾಶನಗಳ ಬಗ್ಗೆ ನಮ್ಮ ಸಮಾಜ ತೋರುತ್ತಿರುವ ಅಪಾರ ನಿರ್ಲಕ್ಷ್ಯಕ್ಕೆ ಇದೊಂದು ಜ್ವಲಂತನಿದರ್ಶನ.

ಋಗ್ಭಾಷ್ಯಟಿಪ್ಪಣಿಯನ್ನಲ್ಲದೆ ಇವರು ಶ್ರೀರಾಘವೇಂದ್ರರ ಶ್ರೀರಾಮಚಾರಿತ್ರಮಂಜರೀ, ಶ್ರೀಕೃಷ್ಣಚಾರಿತ್ರಮಂಜರೀ ಮತ್ತು ಮಹಾಭಾರತತಾತ್ಪರ್ಯನಿರ್ಣಯಾಶಯಸಂಗ್ರಹ ಕೃತಿಗಳಿಗೂ ವ್ಯಾಖ್ಯಾನಗಳನ್ನು ರಚಿಸಿದ್ದು ಅವೆಲ್ಲ ಪರಿಮಳಸಂಶೋಧನಮಂದಿರದಿಂದ



ಪ್ರಕಾಶಿತವಾಗಿವೆ. ಪ್ರಕೃತಕೃತಿ 'ದಶಾವತಾರಮಾಲಿಕಾ' ಇತ್ತೀಚೆಗೆ ನನ್ನ ಸಂಗ್ರಹ(ಶ್ರೀಜಯ-ತೀರ್ಥಸಂಸ್ಕೃತಹಸ್ತಲಿಖಿತಗ್ರಂಥಾಲಯ)ದಲ್ಲಿ ದೊರೆತಿರುವ ಅಪೂರ್ವಕೃತಿ. ಶ್ರೀರಾಘವೇಂದ್ರಸ್ವಾಮಿಗಳ ರಾಮಚಾರಿತ್ರಮಂಜರೀ ಮೊದಲಾದ ಮೂರು ಕೃತಿಗಳ ಮಾದರಿಯಲ್ಲೇ ರಚಿತವಾಗಿರುವ ಒಟ್ಟು ಹದಿಮೂರು ಶ್ಲೋಕಗಳ ಈ ಕೃತಿಯಲ್ಲಿ ಮೊದಲ ಶ್ಲೋಕದಲ್ಲಿ ದಶಾವತಾರಗಳ ವೈಭವ ನಿರೂಪಿತವಾಗಿದೆ. ಮುಂದೆ ಕ್ರಮವಾಗಿ ಹತ್ತು ಶ್ಲೋಕಗಳು ಮತ್ಸ್ಯಾದಿದಶಾವತಾರಗಳ ಸ್ತೋತ್ರವಾಗಿವೆ. ಹನ್ನೆರಡನೆಯ ಪದ್ಯ ಉಪಸಂಹಾರರೂಪವಾಗಿದ್ದು, ಹದಿಮೂರನೆಯ ಪದ್ಯ ಫಲಶ್ರುತಿರೂಪವಾಗಿದೆ. ಮೊದಲ ಹನ್ನೆರಡು ಶ್ಲೋಕಗಳು ಸ್ರಗ್ಧರಾವೃತ್ತದಲ್ಲಿದ್ದು, ಕೊನೆಯದು ಪ್ರಮಾಣಿಕಾವೃತ್ತ-ದಲ್ಲಿದೆ. ಪ್ರತಿಯೊಂದು ಅವತಾರದ ಬಗ್ಗೆ ಸಮಗ್ರವಿವರಣೆ ನೀಡಿರುವದು ಈ ಕೃತಿಯ ವೈಶಿಷ್ಟ್ಯ. ದಶಾವತಾರವನ್ನು ಕುರಿತ ಅನೇಕಸ್ತೋತ್ರಗಳು ಉಪಲಬ್ಧವಿದ್ದು, ಅವುಗಳ ಸಂಗ್ರಹವನ್ನು ನಮ್ಮ ಪ್ರಕಾಶನದ 'ದಶಾವತಾರಸ್ತೋತ್ರಮಾಲಿಕಾ' (ಸ್ತೋತ್ರಮಾಲಿಕಾ ಭಾಗ - ೩) ಕೃತಿಯಲ್ಲಿ ಕೊಡಲಾಗಿದೆ. ಪ್ರಕೃತಕೃತಿ ಪ್ರತಿಯೊಂದು ಅವತಾರದ ಬಗ್ಗೆ ವಿಶೇಷವಿವರಣೆ ನೀಡುವ ಮೂಲಕ ತೀರ ವಿಶಿಷ್ಟವಾದ ಕೃತಿ ಎನ್ನಿಸಿರುವದು ಗಮನಾರ್ಹ. ಲಿಖಿತಪ್ರತಿಯಲ್ಲಿ ಕೊನೆಗೆ 'ಇದಂ ಪುಸ್ತಕಂ ಜೋಹರಾಪುರಸ್ಥ ಅಶ್ವತ್ಥನರಸಿಂಹೇನ ಭಕ್ತ್ಯಾ ಲಿಖಿತಮ್' ಎಂಬದಾಗಿ ಲಿಪಿಕಾರರ ಹೆಸರು ಬರೆಯಲ್ಪಟ್ಟಿದೆ. ಸಕಲಕಾಮನೆಗಳ ಸಂಪೂರ್ತಿ ಇದರ ಶ್ರವಣಪಠನಗಳ ಫಲ ಎಂಬದು ಇದರ ಫಲಶ್ರುತಿ:

**ದಶಾವತಾರಮಾಲಿಕಾಮಿಮಾಂ ಪಠೇಚ್ಛೃಣೋತಿ ಯಃ ।**
**ಸ ಸರ್ವಕಾಮಮಾಪ್ನುಯಾದ್ಧರೇಃ ಪ್ರಸಾದತಃ ಸದಾ ॥**

ಕೊನೆಯಲ್ಲಿನ – 'ಇತಿ ಶ್ರೀಮತ್ಸರ್ವತಂತ್ರಸ್ವತಂತ್ರಶ್ರೀಮದ್ರಾಘವೇಂದ್ರತೀರ್ಥಗುರುಪಾದಶಿಷ್ಯೇಣ ಲಕ್ಷ್ಮೀನಾರಾಯಣಾಖ್ಯೇನ ವಿರಚಿತಾ ದಶಾವತಾರಮಾಲಿಕಾ ಸಮಾಪ್ತಾ' – ಎಂಬ ವಾಕ್ಯ ಶ್ರೀಲಕ್ಷ್ಮೀನಾರಾಯಣಾಚಾರ್ಯರ ಇತರ ಕೃತಿಗಳ ಸಮಾಪ್ತಿವಾಕ್ಯದಂತೆಯೇ ಇದ್ದು, ಇದು ಅವರ ರಚನೆ ಎಂಬದನ್ನು ದೃಢಪಡಿಸುತ್ತದೆ.

ಈ ಸ್ತೋತ್ರದ ಪೂರ್ಣಪಾಠವನ್ನು ಇಲ್ಲಿ ಕೊಡಲಾಗಿದೆ (ಈ ಸ್ತೋತ್ರವನ್ನು ನಮ್ಮ ಪ್ರತಿಷ್ಠಾನದಿಂದ ೨೦೦೮ರಲ್ಲಿ ಪ್ರಕಟಗೊಂಡ ದೇವನಾಗರೀಲಿಪಿಯ 'ಸ್ತೋತ್ರಮಾಲಿಕಾ' ಕೃತಿಯ ಚತುರ್ಥಾವೃತ್ತಿಯಲ್ಲಿ ಮೊದಲಬಾರಿಗೆ ಪ್ರಕಾಶಿಸಲಾಗಿದೆ).

*****

**ವಂದೇ ವೃಂದಾರಕೇಂದ್ರೈರ್ವಿಧಿಭವಮುಖರೈರ್ವಂದಿತಾಂಘ್ರಿಂ ಗುಣಾಬ್ಧಿಂ**
**ನಿರ್ದೋಷಂ ನಿತ್ಯಪೂರ್ಣಾಗಣಿತಗುಣಮಯೈರ್ಮತ್ಸ್ಯಕೂರ್ಮಾದಿರೂಪೈಃ ।**
**ಲೋಕಾನಾಂ ಸೃಷ್ಟಿರಕ್ಷಾಹೃತಿನಿಯತಿಮತಿಪ್ರಾಪಕಂ ಬಂಧಮೋಕ್ಷೌ**
**ದಾತಾರಂ ಧ್ಯೇಯಮಗ್ರ್ಯೈರ್ಮನಸಿ ಮುನಿಗಣೈರ್ವಾಸುದೇವಂ ರಮೇಶಮ್ ॥ ೧ ॥**

ಯೋ ಮತ್ಸ್ಯಾತ್ಮಾऽವತೀರ್ಣಃ ಕಮಲಜಮುಖತೋ ನಿಃಸೃತಾನ್ ಸರ್ವವೇದಾನ್
ಹೃತ್ವಾ ಯಾಂತಂ ಹಯಾಸ್ಯಂ ಸುರರಿಪುಮವಧೀತ್ ಸರ್ವವೇದಾನ್ ವಿಧಾತುಃ ।
ದತ್ವಾ ವೈವಸ್ವತಾಯಾಪ್ಯಸದೃಶಸುದೃಶಂ ಪಾಲಯನ್ ಸ್ವಾನ್ ಮುನೀಂದ್ರಾನ್
ಸೋಽಯಂ ಲಕ್ಷ್ಮೀಪತಿರ್ಮೇ ಪ್ರದಿಶತು ವಿಶದಾಂ ಬುದ್ಧಿಮಿಷ್ಟಾರ್ಥಸಿದ್ಧಿಮ್ ॥ ೨ ॥

ಯಃ ಕೂರ್ಮಾತ್ಮಾऽವತೀರ್ಣಃ ಶಿವವರವಚತೋऽಧಾರ್ಯಮನ್ಯೈರ್ಗಿರೀಂದ್ರಂ
ಪೃಷ್ಠೇನೋದ್ಧೃತ್ಯ ಸಮ್ಯಜ್ಮಥನಸಮಯತಃ ಕ್ಷೀರಧೌ ಮಂದರಾಖ್ಯಮ್ ।
ತತ್ರೋತ್ಪನ್ನಾಮೃತಾದೀನ್ ಸುರರಿಪುವಧತಃ ಪ್ರಾಪಯನ್ ಸರ್ವದೇವಾನ್
ದೇವೋ ದದ್ಯಾದಭೀಷ್ಟಂ ಮಮ ಮಹಿತಗುಣೈಃ ಪೂರ್ಣಕಾಮಃ ಸ ಈಶಃ ॥ ೩ ॥

ಆವಿರ್ಭೂತೋऽಬ್ಜಜೇಶಪ್ರಮುಖಸುರಗಣೈಃ ಪ್ರಾರ್ಥಿತಃ ಶ್ರೀವರಾಹೋ
ಮಗ್ನಾಂ ಭೂಮಿಂ ಲಯಾಬ್ಧೌ ಗಿರಿವನಸಹಿತಾಂ ದ್ವಿಃ ಸಮುದ್ಧಾರ್ಯ ಚೋರ್ಧ್ವಮ್ ।
ನ್ಯಸ್ಯಾಬ್ಜಾಕ್ಷಃ ಸುದಾರ್ಢ್ಯಂ ಸುರಗಣಮಹಿತೋ ತಾಪಮೇಷಾಂ ಪ್ರಕುರ್ವನ್
ಹತ್ವಾ ಪ್ರಹ್ಲಾದತಾತಾವರಜಮಪಿ ಮಹಾನ್ ಪ್ರೀಯತಾಂ ಮೇ ಸ ಚೇಶಃ ॥ ೪ ॥

ಯಃ ಸ್ತಂಭಾದಾವಿರಾಸೀನ್ನೃಗರಿಪುವದನಃ ಪ್ರಾರ್ಥಿತಃ ಸರ್ವದೇವೈ-
ರ್ದೇವಾರಿಂ ಭೂಸುರಾರಿಂ ಸ್ವಸುತಮಪಿ ಭಟೈರ್ಘಾತಯಂತಂ ಹರೀಷ್ಟಮ್ ।
ಹತ್ವಾ ಪ್ರಹ್ಲಾದತಾತಂ ಪ್ರವಿತತನಖರೈರ್ಭಾಗ್ಯತೋ ಭಾಗ್ಯದೇವ್ಯಾ
ಹರ್ಷಂ ಕುರ್ವನ್ ನಿಜಾನಾಂ ಸಮವತು ಸತತಂ ಮಾಂ ಪ್ರಪನ್ನಂ ಸ ಈಶಃ ॥ ೫ ॥

ಯೋऽದಿತ್ಯಾಂ ಕಶ್ಯಪಾಖ್ಯಾತ್ ಗಿರಿಭಿದವರಜೋ ವಾಮನಾಖ್ಯಃ ಪ್ರಜಾತೋ
ಗತ್ವಾ ದೇವಾರಿಭೂತಕ್ರತುಸದನಮಪಿ ಪ್ರಾರ್ಥ್ಯ ಭೂಮಿಂ ಬಲಿಂ ಚ ।
ಹೃತ್ವಾ ಪ್ರಹ್ಲಾದಪೌತ್ರಾತ್ ತ್ರಿದಿವಮಜಮುಖಾನ್ ಹರ್ಷಯನ್ ಸರ್ವದೇವಾನ್
ಸೋऽಯಂ ಸರ್ವೇಶ್ವರೋ ಮೇ ಪ್ರದಿಶತು ವಿಶದಾಂ ಸಂಪದಂ ಸರ್ವವಂದ್ಯಃ ॥ ೬ ॥

ಯೋ ಭೂಮಾವಾವಿರಾಸೀದ್ಭೃಗುಕುಲತಿಲಕೋ ರಾಮನಾಮಾऽದ್ಯ ದೇವೋ
ದೈತ್ಯಾನ್ ಕ್ಷತ್ರೇಷು ಜಾತಾನ್ ಶಿವವರಬಲತೋ ಗರ್ವಿತಾನಪ್ಯವಧ್ಯಾನ್ ।
ಹತ್ವಾ ತದ್ದೇಹಜಾತೈರ್ಬಹುರುಧಿರಗಣೈಃ ಸೇವ್ಯತೀರ್ಥಾನಿ ಕೃತ್ವಾ
ರಕ್ಷನ್ ಲೋಕಾನ್ ಸಮಸ್ತಾನ್ ಸಮವತು ಸತತಂ ಮಾಂ ಪ್ರಪನ್ನಂ ಸ ಈಶಃ ॥ ೭ ॥

ಪೂರ್ವಂ ಬ್ರಹ್ಮಾದಿದೇವೈಃ ಕ್ಷಿತಿಭರಹರಣೇ ಪ್ರಾರ್ಥಿತಃ ಪ್ರಾದುರಾಸೀತ್
ಕೌಸಲ್ಯಾಯಾಂ ಗುಣಾಢ್ಯಾದ್ದಶರಥನೃಪತೇಃ ಪುತ್ರಕಾಮೇಷ್ಟಿತುಷ್ಟಃ ।
ಹತ್ವಾ ಭೂಮೌ ದಶಾಸ್ಯಪ್ರಮುಖಸುರರಿಪೂನ್ ರಾಮನಾಮಾऽದ್ಯ ದೇವೋ
ಭಕ್ತಾಭೀಷ್ಟಂ ಪ್ರಕುರ್ವನ್ ಸಮವತು ಸತತಂ ಮಾಂ ಪ್ರಪನ್ನಂ ಸ ಈಶಃ ॥ ೮ ॥



ಪೂರ್ವಂ ಕ್ಷೀರಾಬ್ಧಿಶಾಯೀ ಸಕಲಸುರಗಣೈಃ ಪ್ರಾರ್ಥಿತಃ ಪ್ರಾದುರಾಸೀ-
ದ್ದುಷ್ಟಾನ್ ಹಂತುಂ ಕ್ಷಿತೀಶಾನ್ ಯದುಕುಲತಿಲಕೋ ಶೂರಜಾತ್ ಕೃಷ್ಣನಾಮಾ ।
ದೇವಕ್ಯಾಂ ಯೋऽದ್ಯ ಹಂತಾ ಸಕಲಸುರರಿಪೂನ್ ಭೂತಲೇ ಭೂತಿದಾತಾ
ಭಕ್ತಾನಾಂ ಭಕ್ತವಂದ್ಯಃ ಸಮವತು ಸತತಂ ಮಾಂ ಪ್ರಪನ್ನಂ ಸ ಈಶಃ ॥ ೯ ॥

ಕಾಲಸ್ಯಾದೌ ಕಲೇರ್ಯಃ ಸಕಲಸುರಗಣೈಃ ಪ್ರಾರ್ಥಿತಃ ಶ್ರೀಶದೇವೋ
ಬುದ್ಧಾಖ್ಯಃ ಪ್ರಾದುರಾಸೀತ್ ಸುಕೃತಸರಣಿತಸ್ತ್ಯಾಜನಾರ್ಥಂ ಜಿನಾದೀನ್ ।
ಪೂರ್ವಂ ಯುದ್ಧೇ ಹತಾನ್ ಯಸ್ತ್ರಿಪುರವಿಜಯಿನಾ ತ್ರೈಪುರಾನ್ ಭೂಮಿಜಾತಾನ್
ಪ್ರಾಪಯ್ಯಾಧರ್ಮಮಾರ್ಗಂ ವ್ಯತನುತ ವಿವಿಧಂ ಧರ್ಮಮಾರ್ಗಂ ತಮೀಡೇ ॥೧೦॥

ಕಾಲಸ್ಯಾಂತೇ ಕಲೇರ್ಯಃ ಸಕಲಸುರಗಣೈಃ ಪ್ರಾರ್ಥಿತಃ ಪ್ರಾದುರಾಸೀತ್
ಲಕ್ಷ್ಮೀಶಃ ಕಲ್ಕಿನಾಮಾ ಕಲಿಮಲಕಲುಷಾನ್ ದುರ್ಜನಾನ್ ಧರ್ಮಹೀನಾನ್ ।
ಅಶ್ವಾರೂಢೋऽದ್ಯ ಹತ್ವಾ ಹರಿಚರಣಜುಷಾಂ ಸೌಖ್ಯಕಾರೀ ಜನಾನಾಂ
ಸೋऽಯಂ ಸರ್ವೇಶ್ವರೋ ಮೇ ಪ್ರದಿಶತು ವಿಶದಾಂ ಜ್ಞಾನಭಕ್ತ್ಯಾದಿವೃದ್ಧಿಮ್ ॥೧೧॥

ಲಕ್ಷ್ಮೀನಾರಾಯಣಾಖ್ಯೋ ಹರಿಚರಣಜುಷಾಂ ಸೇವಕಸ್ತತ್ಪ್ರಸಾದಾ-
ದ್ವಿಷ್ಣೋರ್ಮತ್ಸ್ಯಾದಿಮೂರ್ತೇರ್ಜಗದುದಯಲಯಜ್ಞಾನಮೋಕ್ಷಾದಿದಾತುಃ ।
ಪ್ರೀತ್ಯರ್ಥಂ ಮಾಲಿಕಾಭಾಂ ಸ್ತುತಿಮಿಹ ಕೃತವಾನೇತಯಾ ಯೇ ಭಜಂತೇ
ವಿಷ್ಣುಂ ತೇಷಾಂ ರಮೇಶಃ ಪ್ರದಿಶತಿ ವಿಶದಾಂ ಸರ್ವಸಂಪತ್ಸಮೃದ್ಧಿಮ್ ॥ ೧೨ ॥

ದಶಾವತಾರಮಾಲಿಕಾಮಿಮಾಂ ಪಠೇಚ್ಛೃಣೋತಿ ಯಃ ।
ಸ ಸರ್ವಕಾಮಮಾಪ್ನುಯಾದ್ಧರೇಃ ಪ್ರಸಾದತಃ ಸದಾ ॥ ೧೩ ॥

॥ ಇತಿ ಶ್ರೀಮತ್ಸರ್ವತಂತ್ರಸ್ವತಂತ್ರಶ್ರೀಮದ್ರಾಘವೇಂದ್ರತೀರ್ಥಗುರುಪಾದಶಿಷ್ಯೇಣ ಲಕ್ಷ್ಮೀನಾರಾಯಣಾಖ್ಯೇನ ವಿರಚಿತಾ ದಶಾವತಾರಮಾಲಿಕಾ ಸಮಾಪ್ತಾ ॥

*****

ಸಾಮಾನ್ಯವಾಗಿ ಒಂದೆರೆಡು ಮಂತ್ರಗಳ ಸಿದ್ಧಿಪಡೆದವರು ನೀಡುವ ಅನುಗ್ರಹ ಮಂತ್ರಾಕ್ಷತೆ, ಪ್ರಸಾದಗಳು ಅದ್ಭುತವೆನ್ನಿಸುವ ಫಲಗಳನ್ನು ನೀಡುವುದು ಲೋಕದಲ್ಲಿ ಕಂಡಿದೆ. ಮೂಲಗುರುಗಳಾದ ಶ್ರೀಮಧ್ವಾಚಾರ್ಯರು ಶ್ರೀರಾಘವೇಂದ್ರಸ್ವಾಮಿಗಳು 'ಪ್ರಾತಃಸಂಕಲ್ಪಗದ್ಯ'ದಲ್ಲಿ ತಿಳಿಸಿರುವಂತೆ ಸಪ್ತಕೋಟಿ ಮಹಾಮಂತ್ರಗಳ ಸಂಪೂರ್ಣಸಿದ್ಧಿ ಪಡೆದ ಲೋಕೋತ್ತರ ಮಹನೀಯರು. ಅವರ ಸ್ಮರಣೆಯೂ ಸಹ ಕುಲಕೋಟಿಉದ್ಧಾರಕ ಎಂಬುದು ಇದರಿಂದ ಸುಲಭವಾಗಿ ತಿಳಿಯುವುದು. ಅದಕ್ಕಾಗಿಯೇ ಶ್ರೀಹರಿವಾಯುಸ್ತುತಿ, ಸುಮಧ್ವವಿಜಯ, ಮಧ್ವನಾಮಗಳ ಪಠಣಪಾರಾಯಣಗಳು ವಿಶೇಷವಾಗಿ ವಿಹಿತವಾಗಿವೆ.

# ನವಪ್ರಕಾಶಿತ ಮಾಧ್ವಗ್ರಂಥಗಳು

**೧)ಬಾಲರಾಮಾಯಣ (ಶಮ್ಯಾಪ್ರಾಸಗ್ರಂಥಮಾಲಾ - ೩೩) :-** ರಚನೆ : ಶ್ರೀಶ್ರೀ ವಿಶ್ವನಂದನತೀರ್ಥಶ್ರೀಪಾದರು, ಪ್ರಕಾಶಕರು: ಶ್ರೀಹಯಗ್ರೀವವಿಠಲ ಟ್ರಸ್ಟ್(ರಿ), ೦೩, ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು -೫೬೦೦೧೮, ದೂರವಾಣಿ : ೦೮೦-೩೨೯೯೧೧, ೯೩೪೧೫೫೧೪೧೪. ಪುಟಗಳು: ೪೦+೩೩೪, ಬೆಲೆ: ರೂ. ೧೨೫; ಪ್ರಕಾಶನ : ೨೦೧೦.

**೨)ಶ್ರೀಹರಿವಾಯುಸ್ತುತಿಃ (ಅರ್ಥ ಮತ್ತು ವಿಶೇಷ ವಿವರಣೆಗಳು) (ಶಮ್ಯಾಪ್ರಾಸಗ್ರಂಥಮಾಲಾ - ೩೨) :-** ಅನುವಾದಕರು : ಶ್ರೀಶ್ರೀವಿಶ್ವನಂದನತೀರ್ಥ ಶ್ರೀಪಾದರು, ಪ್ರಕಾಶಕರು: ಶ್ರೀಹಯಗ್ರೀವವಿಠಲ ಟ್ರಸ್ಟ್(ರಿ), ೦೩, ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು -೫೬೦೦೧೮, ದೂರವಾಣಿ : ೦೮೦-೩೨೯೯೧೧, ೯೩೪೧೫೫೧೪೧೪. ಪುಟಗಳು: ೪+೧೭೨, ಬೆಲೆ: ರೂ. ೪೫; ಪ್ರಕಾಶನ : ೨೦೧೦.

**೩)ಶ್ರೀಕೃಷ್ಣಾಷ್ಟೋತ್ತರಶತನಾಮಸ್ತೋತ್ರಂ (ಸಂಸ್ಕೃತ ಮತ್ತು ಕನ್ನಡ ವ್ಯಾಖ್ಯಾನ) (ಶಮ್ಯಾಪ್ರಾಸಗ್ರಂಥಮಾಲಾ - ೩೧) :-** ರಚನೆ : ಶ್ರೀಶ್ರೀವಿಶ್ವನಂದನತೀರ್ಥ ಶ್ರೀಪಾದರು, ಪ್ರಕಾಶಕರು: ಶ್ರೀಹಯಗ್ರೀವವಿಠಲ ಟ್ರಸ್ಟ್(ರಿ), ೦೩, ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು -೫೬೦೦೧೮, ದೂರವಾಣಿ : ೦೮೦-೩೨೯೯೧೧, ೯೩೪೧೫೫೧೪೧೪. ಪುಟಗಳು: ೩೨, ಬೆಲೆ: ರೂ. ೧೫; ಪ್ರಕಾಶನ : ೨೦೧೦.

**೪)ಹರಿ-ವಾಯುಲೀಲಾವಿಸ್ತರಣಂ (ಪವಮಾನಸೂಕ್ತ ವ್ಯಾಖ್ಯಾನ) :-** ಅನುವಾದಕರು: ಡಾ|| ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯ, ಪ್ರಕಾಶಕರು: ಚತುರ್ವೇದಿ ಸಂಶೋಧನಾ ಪ್ರತಿಷ್ಠಾನಂ(ರಿ), ನಂ. ೧೮೪, ಶ್ರೀಮದ್ಭಾಗವತಮಂದಿರಮ್, ೨೨ನೇ ಮುಖ್ಯರಸ್ತೆ, ೧೨ ಎ ಅಡ್ಡರಸ್ತೆ, ರಾಘವೇಂದ್ರ ಲೇಔಟ್, ಪದ್ಮನಾಭನಗರ, ಬೆಂಗಳೂರು-೫೬೦೦೭೦. ದೂರವಾಣಿ : ೦೮೦-೨೬೩೯೩೯೫೦, ೯೪೪೯೨೧೩೭೭೭. ಪುಟಗಳು: ೧೦೬+೪೬೫, ಬೆಲೆ: ರೂ. ೩೫೦; ಪ್ರಥಮಮುದ್ರಣ : ೨೦೦೯.

**೫) ಶ್ರೀಜಗನ್ನಾಥದಾಸರ ಶ್ರೀಹರಿಕಥಾಮೃತಸಾರ (ಭಾವಕುಸುಮ):-** ಲೇಖಕರು : ಶ್ರೀಮತಿ ನಿರ್ಮಲಾ ಬಿ.ಮಾಹುಲಿ, ಪ್ರಕಾಶಕರು: ಶ್ರೀ ಬಿ.ಆರ್ ಬಾಹುಲಿ, ನವರಸಪುರ ಕಾಲೋನಿ, ಬಾಗಲಕೋಟ ರಸ್ತೆ, ಹೊಸ ಕೋರ್ಟ್ ಎದುರಿಗೆ, ನಂಜನಗೂಡು ರಾಯರ ಮಠದ ಹತ್ತಿರ, ವಿಜಾಪುರ-೬೮೬೧೦೧. ದೂರವಾಣಿ : ೦೮೩೫೨-೨೭೬೨೩೩, ೯೪೮೦೫೩೪೧೧೨. ಪುಟಗಳು: ೧೨+೫೪೦, ಬೆಲೆ: ರೂ. ೨೦೦. ಮೊದಲ ಮುದ್ರಣ: ಜನವರಿ ೨೦೦೯.

*****



# ಗ್ರಂಥವಿಮರ್ಶೆ

**ಹರಿ-ವಾಯುಲೀಲಾವಿಸ್ತರಣಮ್ (ಪವಮಾನಸೂಕ್ತ ವ್ಯಾಖ್ಯಾನ)**
ಅನುವಾದಕರು: ಡಾ|| ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯ, ಪ್ರಕಾಶಕರು: ಚತುರ್ವೇದಿ ಸಂಶೋಧನಾ ಪ್ರತಿಷ್ಠಾನಂ(ರಿ), ನಂ. ೧೮೪, ಶ್ರೀಮದ್ಭಾಗವತಮಂದಿರಮ್, ೨೨ನೇ ಮುಖ್ಯರಸ್ತೆ, ೧೨ ಎ ಅಡ್ಡರಸ್ತೆ, ರಾಘವೇಂದ್ರ ಲೇಔಟ್, ಪದ್ಮನಾಭನಗರ, ಬೆಂಗಳೂರು-೫೬೦೦೭೦. ದೂರವಾಣಿ : ೦೮೦-೨೬೩೯೩೯೫೦, ೯೪೪೯೨೧೩೭೭೭. ಪುಟಗಳು: ೧೦೬+೪೬೫, ಬೆಲೆ: ರೂ. ೩೫೦; ಪ್ರಥಮಮುದ್ರಣ : ೨೦೦೯.

ಋಗ್ವೇದದ ಒಂಭತ್ತನೇ ಮಂಡಲ ಪವಮಾನ ಮಂಡಲವೆಂದೇ ಪ್ರಸಿದ್ಧವಾಗಿರುವ ವಿಶಿಷ್ಟ ವೇದಭಾಗ. ಶ್ರೀಮದಾಚಾರ್ಯರು ಇದನ್ನು 'ವಿಷ್ಣುನೀರಾಜನ' ಎಂಬುದಾಗಿ ಶ್ರೀಮದ್ಭಾಗವತತಾತ್ಪರ್ಯದಲ್ಲಿ ವರ್ಣಿಸಿದ್ದಾರೆ. ಶ್ರೀಹರಿವಾಯುಗಳ ವಿಶೇಷಮಹಿಮೆ-ಗಳನ್ನು ಪರಿಪರಿಯಾಗಿ ಬಣ್ಣಿಸುವ ಈ ಭಾಗದ ಪಾರಾಯಣ ಹೋಮಗಳು ಅತ್ಯಂತ ಪ್ರಸಿದ್ಧ. ಒಂದರ್ಥದಲ್ಲಿ ಇದು ವೈದಿಕವಾಯುಸ್ತುತಿ. ದೇವಕಾರ್ಯದಂತೆ ಪಿತೃಕಾರ್ಯ-ದಲ್ಲೂ ವಿಹಿತವಾಗಿರುವುದೂ ಇದರ ಮತ್ತೊಂದು ವಿಶೇಷ. ಇದರ ಪಠನ, ಶ್ರವಣ, ಅರ್ಚನೆ, ಅಭಿಷೇಕ, ಹೋಮ ಮೊದಲಾದವುಗಳು ಸಕಲಾಭೀಷ್ಟಪ್ರದ ಎಂದು ವಿಖ್ಯಾತ. ಐತರೇಯಭಾಷ್ಯದಲ್ಲಿ ತಿಳಿಸಲ್ಪಟ್ಟಿರುವಂತೆ ಇದರಲ್ಲಿಯ 'ಯದಂತಿ ಯಚ್ಚ ದೂರಕೇ' ಇತ್ಯಾದಿ ಮಂತ್ರಗಳ ಪಠಣೆ ಅಪಮೃತ್ಯುಪರಿಹಾರಕ. ಜನ್ಮಾಂತರಗಳ ಪಾತಕಗಳೂ ಇದರಿಂದ ಪರಿಹಾರ, ಸಪ್ತಜನ್ಮಗಳಲ್ಲಿ ಬ್ರಾಹ್ಮಣಜನ್ಮಪ್ರಾಪ್ತಿ ಮೊದಲಾದವು ಇದರ ಇನ್ನಿತರ ಫಲಗಳು. ಇಂದು ಪ್ರಸಿದ್ಧವಾದ ಹೋಮಗಳಲ್ಲಿ ಪವಮಾನಹೋಮಕ್ಕೆ ಅಗ್ರಸ್ಥಾನ. ಪ್ರಸ್ತುತ ಕೃತಿ ಶ್ರೀಹರಿವಾಯುಲೀಲಾವಿಸ್ತರಣ ಈ ಪವಮಾನಮಂಡಲವನ್ನು ಸಮಗ್ರವಾಗಿ ಕನ್ನಡ ಅನುವಾದದೊಂದಿಗೆ ಒದಗಿಸುತ್ತದೆ.

ಪಾಠಪ್ರವಚನ, ಗ್ರಂಥರಚನೆ ಮೊದಲಾದ ಅನೇಕ ಉಪಯುಕ್ತ ಕಾರ್ಯಗಳಿಂದ ಆಸ್ತಿಕರಿಗೆ ಉಪಕಾರ ಮಾಡುತ್ತಿರುವ ವಿದ್ವಾನ್ ಚತುರ್ವೇದಿ ವೇದವ್ಯಾಸಾಚಾರ್ಯರು ಪ್ರಸ್ತುತ ಕೃತಿಯಲ್ಲಿ ಪವಮಾನದ ಬಗ್ಗೆ ಅನೇಕ ಮಾಹಿತಿಗಳನ್ನು ನೀಡಿರುವರು. ಅನುವಾದವೂ ಸಹ ಶ್ರೀಹರಿವಾಯುಗಳ ಅವತಾರತ್ರಯಕ್ಕೆ ಅನ್ವಯಿಸುವಂತೆ ರಚಿತವಾಗಿರುವುದು ವಿಶೇಷ. ಪ್ರಾರಂಭದಲ್ಲಿ ಪವಮಾನಹೋಮದ ವಿಧಿವಿಧಾನಗಳನ್ನು ವಿವರವಾಗಿ ನೀಡಿರುವುದು ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿದೆ. ತತ್ತ್ವನ್ಯಾಸ, ಮಾತೃಕಾನ್ಯಾಸ, ಪೀಠಪೂಜೆ, ಆವರಣಪೂಜೆ ಮೊದಲಾದ ವಿವರಗಳೂ ಇದರಲ್ಲಿ ಸಂಕಲಿತವಾಗಿವೆ. ಮುಖ್ಯವಾಗಿ ಚಿಕ್ಕೋಡಿ ಭಗವಂತರಾಯರ ವ್ಯಾಖ್ಯಾನವನ್ನು ಹಾಗೂ ಕೃಷ್ಣಾಚಾರ್ಯ ಪಾಂಗರಿಯವರ ಅನುವಾದವನ್ನು ಆಧರಿಸಿರುವ ಈ ಕೃತಿ ಸರ್ವಮೂಲ

ಗ್ರಂಥಗಳಿಂದಲೂ, ಶ್ರೀವಾದಿರಾಜಸ್ವಾಮಿಗಳ ಯುಕ್ತಿಮಲ್ಲಿಕಾ ಗ್ರಂಥದಿಂದಲೂ ವಿವರಗಳನ್ನು ಹೊಂದಿ ಅತ್ಯಂತ ಸಂಗ್ರಹಯೋಗ್ಯವಾಗಿ ಸಿದ್ಧವಾಗಿದೆ. ಪ್ರತಿಪದಾರ್ಥ ಇದರ ಮುಖ್ಯ ಆಕರ್ಷಣೆ. ಮುದ್ರಣವು ಸಹ ಆಕರ್ಷಕವಾಗಿದೆ.

ಅಧ್ಯಯನಕ್ಕೆ ಅನುಕೂಲವಾಗುವಂತೆ ಮಂತ್ರಾನುಕ್ರಮಣಿಕೆಯನ್ನು ನೀಡಿದ್ದಲ್ಲಿ ಇದರ ಉಪಯುಕ್ತತೆ ಮತ್ತಷ್ಟು ಹೆಚ್ಚುತ್ತಿತ್ತು. ಅದರೊಂದಿಗೆ ಮಧ್ಯ ಉಲ್ಲೇಖಿಸಿರುವ ಅನೇಕ ಪ್ರಮಾಣವಚನಗಳ ಆಕರಸೂಚನೆಯೂ ಸಹ ಅಗತ್ಯವಾಗಿತ್ತು. ಮುಂದಿನ ಆವೃತ್ತಿಯಲ್ಲಿ ಇವುಗಳನ್ನು ಅಳವಡಿಸುವ ಕಾರ್ಯವನ್ನು ಶ್ರೀಯುತರು ಕೈಗೊಂಡಲ್ಲಿ ಇದರ ಮೌಲ್ಯ ಮತ್ತಷ್ಟು ಹೆಚ್ಚುತ್ತದೆ. ಆಸ್ತಿಕರೆಲ್ಲ ಅವಶ್ಯ ಸಂಗ್ರಹಿಸಬೇಕಾದ ಇಂತಹ ಉತ್ತಮ ಕೃತಿಗಾಗಿ ಶ್ರೀಯುತ ಆಚಾರ್ಯರು ಅಭಿನಂದನಾರ್ಹರಾಗಿರುವರು.

*****


**ಗೋಮಾತೆಯ ಸೇವೆಗೆ ಒಂದು ಸುವರ್ಣಾವಕಾಶ**

**ಗೋವರ್ಧನ ಗಿರಿ ವಿಶ್ವಸ್ತ ಮಂಡಳಿ**

**ಶ್ರೀಪೇಜಾವರ ಅಧೋಕ್ಷಜ ಮಠ, ಉಡುಪಿ**

ಶ್ರೀಮನ್ಮಧ್ವಾಚಾರ್ಯರಿಂದ ಸಂದರ್ಶಿತವಾದ ಕೊಡವೂರಿನಲ್ಲಿ ಸುಮಾರು ಎರಡು ಎಕರೆ ಜಾಗದಲ್ಲಿ ಗೋಶಾಲೆಯನ್ನು ಹದಿನೇಳು ವರ್ಷಗಳಿಂದ ನಡೆಸುತ್ತಿರುವ ಗೋವರ್ಧನಗಿರಿ ವಿಶ್ವಸ್ತ ಮಂಡಳಿಯು ಉಡುಪಿಯಿಂದ ಇಪತ್ತು ಕಿ.ಮೀ. ದೂರದ ನೀಲಾವರದಲ್ಲಿ ಇಪ್ಪತ್ತೆಂಟು ಎಕರೆ ಪ್ರದೇಶದಲ್ಲಿ ನಾಲ್ಕು ಹಟ್ಟಿಗಳುಳ್ಳ ಗೋಶಾಲೆಯೊಂದನ್ನು ತೆರೆದಿದೆ. ಈಗ ಅಲ್ಲಿ ಒಟ್ಟು ೬೫೦ಕ್ಕಿಂತ ಹೆಚ್ಚು ಗೋವುಗಳ ಸಂರಕ್ಷಣೆ ನದೆದಿದೆ. ಅದಕ್ಕೆ ಪ್ರತಿ ತಿಂಗಳು ಸುಮಾರು ಎರಡು ಲಕ್ಷ ರುಪಾಯಿಗಳ ಖರ್ಚು ತಗಲುತ್ತಿದೆ. ಅದನ್ನು ನಿರ್ವಹಿಸಲು ನಮ್ಮ ವಿಶ್ವಸ್ತ ಮಂಡಳಿಯು ಯೋಜನೆಯೊಂದನ್ನು ರೂಪಿಸಿದ್ದು ಅದರ ಸದುಪಯೋಗ ಪಡೆಯಲು ಆಸ್ತಿಕರನ್ನು ವಿನಂತಿಸಿಕೊಳ್ಳಲಾಗಿದೆ. ಗೋವುಗಳಲ್ಲಿ ಸಮಸ್ತದೇವತೆಗಳ ಸನ್ನಿಧಾನ ಹಾಗೂ ಶ್ರೀಲಕ್ಷ್ಮೀನಾರಾಯಣರ ವಿಶೇಷ ಸನ್ನಿಧಾನ. ಈ ಗೋಸೇವೆಯ ಅವಕಾಶ ಜನ್ಮಜನ್ಮಾಂತರದ ಸುಕೃತದ ಫಲ.

| | |
|---|---|
| ೧. ಮಹಾಪೋಷಕರು (ಆಜೀವ ಸದಸ್ಯರು) | ರೂ. ೧,೦೦,೦೦೦ |
| ೨. ಪೋಷಕರು (೧೦ ವರ್ಷಗಳ ಸದಸ್ಯತ್ವ) | ರೂ. ೫೦,೦೦೦ |
| ೩. ವಾರ್ಷಿಕ ಸದಸ್ಯರು | ಪ್ರತಿವರ್ಷ ರೂ. ೧೦,೦೦೦ |
| ೪. ಸಾಮಾನ್ಯ ಸದಸ್ಯರು | ಪ್ರತಿವರ್ಷ ರೂ. ೨,೫೦೦ |

ವಿ.ಸೂ. : ಆಸಕ್ತರು 'ಗೋವರ್ಧನಗಿರಿ ವಿಶ್ವಸ್ತ ಮಂಡಳಿ', ಶ್ರೀಪೇಜಾವರಮಠ ಉಡುಪಿ - ಇವರಿಗೆ ನಗದು, ಚೆಕ್, ಡಿಡಿ ಮೂಲಕ ಸೇವೆ ಸಲ್ಲಿಸಬಹುದು.




# ಮಾಸದ ವಿಶೇಷಗಳು

## ಮಾಘಮಾಸ-ಕೃಷ್ಣಪಕ್ಷ(ಮಾಸನಿಯಾಮಕ: ಕಮಲಾ-ಮಾಧವ)

೧೨.೦೨.೧೦: ಮಹಾಶಿವರಾತ್ರಿ, ಕುಂಭ ಸಂಕ್ರಮಣ
೧೩.೦೨.೧೦: ದರ್ಶ, ವಿಷ್ಣುಪಂಚಕವ್ರತ
೧೪.೦೨.೧೦: ವಿಷ್ಣುಪಂಚಕವ್ರತ

## ಫಾಲ್ಗುಣಮಾಸ-ಶುಕ್ಲಪಕ್ಷ (ಮಾಸನಿಯಾಮಕ: ಪದ್ಮಾ-ಗೋವಿಂದ)

೧೫.೦೨.೧೦: ಪಯೋವ್ರತ ಆರಂಭ
೧೬.೦೨.೧೦: ಶ್ರೀರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕದ ದಿನ
೨೧.೦೨.೧೦: ಶ್ರೀರಾಘವೇಂದ್ರಸ್ವಾಮಿಗಳ ವರ್ಧಂತಿ
೨೪.೦೨.೧೦: ದಶಮೀ
೨೫.೦೨.೧೦: **ಸರ್ವರಿಗೂ ಏಕಾದಶೀ (ಆಮಲಕೀ)**
೨೬.೦೨.೧೦: ದ್ವಾದಶೀ, ಪಯೋವ್ರತ ಸಮಾಪ್ತಿ
೨೮.೦೨.೧೦: ಹೋಳೀಹುಣ್ಣಿಮೆ, ವಿಷ್ಣುಪಂಚಕವ್ರತ, ಮನ್ವಾದಿ

## ಫಾಲ್ಗುಣಮಾಸ-ಕೃಷ್ಣಪಕ್ಷ(ಮಾಸನಿಯಾಮಕ: ಪದ್ಮಾ-ಗೋವಿಂದ)

೦೫.೦೩.೧೦: ರಂಗಪಂಚಮೀ
೦೬.೦೩.೧೦: ಅಷ್ಟಕಾಶ್ರಾದ್ಧ
೦೮.೦೩.೧೦: ಅನ್ವಷ್ಟಕಾಶ್ರಾದ್ಧ
೧೦.೦೩.೧೦: ದಶಮೀ
೧೧.೦೩.೧೦: **ಸರ್ವರಿಗೂ ಏಕಾದಶೀ (ಪಾಪಮೋಚಿನೀ)**
೧೨.೦೩.೧೦: **ಶ್ರವಣದ್ವಾದಶೀ ಉಪವಾಸ**
೧೩.೦೩.೧೦: ಪಾರಣೆ
೧೪.೦೩.೧೦: ಮೀನಸಂಕ್ರಮಣ
೧೫.೦೩.೧೦: ವಿಷ್ಣುಪಂಚಕವ್ರತ, ದರ್ಶ

## ವಿಕೃತಿನಾಮಸಂವತ್ಸರ
## ಚೈತ್ರಮಾಸ-ಶುಕ್ಲಪಕ್ಷ(ಮಾಸನಿಯಾಮಕ: ಪದ್ಮೀ-ವಿಷ್ಣು)

೧೬.೦೩.೧೦: ಯುಗಾದಿ, ವಿಕೃತಿಸಂವತ್ಸರಾರಂಭ, ಅಭ್ಯಂಗ, ನಿಂಬಪುಷ್ಪಭಕ್ಷಣ, ಪಂಚಾಂಗಶ್ರವಣ, ಶ್ರೀರಾಮನವರಾತ್ರಾರಂಭ, ಶ್ವೇತವರಾಹಕಲ್ಪಾದಿ

೧೭.೦೩.೧೦: ಚಂದ್ರದರ್ಶನ
೧೮.೦೩.೧೦: ಮತ್ಸ್ಯಜಯಂತೀ, ಗೌರೀತೃತೀಯಾ, ಮನ್ವಾದಿ
೨೨.೦೩.೧೦: ನವಲೀ ಭೋಗಾಪುರೇಶರಥೋತ್ಸವ
೨೩.೦೩.೧೦: ದುರ್ಗಾಷ್ಟಮೀ, ಭವಾನೀಜಯಂತೀ
೨೪.೦೩.೧೦: ಶ್ರೀರಾಮನವಮೀ
೨೫.೦೩.೧೦: ದಶಮೀ, ಗುರುಪುಷ್ಯಾಮೃತಯೋಗ,
ಶ್ರೀಪ್ರಾಣದೇವರ ರಥೋತ್ಸವ(ಕೋರವಾರ)
೨೬.೦೩.೧೦: **ಸರ್ವರಿಗೂ ಏಕಾದಶೀ (ಕಾಮದಾ)**
೨೭.೦೩.೧೦: ದ್ವಾದಶೀ, ಮಹಾವಿಷ್ಣುವಿಗೆ ದವನಸಮರ್ಪಣೆ
೩೦.೦೩.೧೦: ಹನುಮಜ್ಜಯಂತೀ, ಮನ್ವಾದಿ, ವೈಶಾಖಸ್ನಾನಾರಂಭ,
ವಿಷ್ಣುಪಂಚಕ ಉಪವಾಸ ಇರುವುದಿಲ್ಲ

## ಗುರುಗಳ ಪುಣ್ಯದಿನಗಳು

೧೧.೦೨.೧೦: ಶ್ರೀವಿಷ್ಣುತೀರ್ಥರು, ಮಾದನೂರು
೧೪.೦೨.೧೦: ಶ್ರೀಶ್ರೀಕಾಂತತೀರ್ಥರು (ಶ್ರೀಪಾ.ಮ.), ನಂಗಲಿ
೨೦.೦೨.೧೦: ಶ್ರೀಸತ್ಯವ್ರತತೀರ್ಥರು (ಉ.ಮ.), ಸಾಂಗಲಿ
೨೫.೦೨.೧೦: ಶ್ರೀಧೀರೇಂದ್ರತೀರ್ಥರು (ರಾ.ಮ.), ಹೊಸರಿತ್ತಿ
೨೮.೦೨.೧೦: ಶ್ರೀಪರಶುರಾಮತೀರ್ಥರು (ಶ್ರೀಪಾ,.ಮ.), ಶ್ರೀರಂಗ
ಶ್ರೀಸುಜ್ಞಾನನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
೦೧.೦೩.೧೦: ಶ್ರೀಸತ್ಯಬೋಧತೀರ್ಥರು (ಉ.ಮ.), ಸವಣೂರು
೦೨.೦೩.೧೦: ಶ್ರೀಸುಧೀಂದ್ರತೀರ್ಥರು (ರಾ.ಮ.), ನವಬೃಂದಾವನ
ಶ್ರೀವಿಜಯನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
೦೩.೦೩.೧೦: ಶ್ರೀವಾದಿರಾಜಸ್ವಾಮಿಗಳು, ಸೋದೆ[೧]
೦೪.೦೩.೧೦: ಶ್ರೀವ್ಯಾಸರಾಜರು, ನವಬೃಂದಾವನ[೨]
೦೫.೦೩.೧೦: ಶ್ರೀಗೋವಿಂದ ಒಡೆಯರು (ವ್ಯಾ.ಮ.), ನವಬೃಂದಾವನ
೦೭.೦೩.೧೦: ಶ್ರೀಉದ್ದಂಡರಾಮಚಂದ್ರತೀರ್ಥರು (ಶ್ರೀಪಾ.ಮ.), ಪೆನುಗೊಂಡ
೦೮.೦೩.೧೦: ಶ್ರೀಸುಧೀನಿಧಿತೀರ್ಥರು (ಶ್ರೀಪಾ.ಮ.), ಒಡಪ್ಪಳ್ಳಿ
೧೫.೦೩.೧೦: ಶ್ರೀಸತ್ಯಸಂತುಷ್ಟತೀರ್ಥರು (ಉ.ಮ.), ಮೈಸೂರು
೧೬.೦೩.೧೦: ಶ್ರೀಪುರುಷೋತ್ತಮತೀರ್ಥರು, ಅಬ್ಬೂರು

೧., ೨. ಶ್ರೀವ್ಯಾಸರಾಜರು ಹಾಗೂ ಶ್ರೀವಾದಿರಾಜಸ್ವಾಮಿಗಳನ್ನು ಕುರಿತ ಲೇಖನಗಳಿಗೆ 'ಶ್ರೀವ್ಯಾಸಮಧ್ವ' ಮಾಸಪತ್ರಿಕೆಯ ಮಾರ್ಚ್ ೨೦೦೯ರ ಸಂಚಿಕೆಯನ್ನು ನೋಡಬಹುದು.



೧೭.೦೩.೧೦: ಶ್ರೀವೇದವ್ಯಾಸತೀರ್ಥರು (ಉ.ಮ.), ಪೆನುಗೊಂಡ
ಶ್ರೀಸತ್ಯಪ್ರಜ್ಞತೀರ್ಥರು (ಉ.ಮ.), ಆತಕೂರ್
೨೩.೦೩.೧೦: ಶ್ರೀಸತ್ಯಧ್ಯಾನತೀರ್ಥರು (ಉ.ಮ.), ಪಂಢರಪುರ
೨೪.೦೩.೧೦: ಶ್ರೀಕವಿಂದ್ರತೀರ್ಥರು, ನವಬೃಂದಾವನ,
ಶ್ರೀಪ್ರಾಜ್ಞನಿಧಿತೀರ್ಥರು (ಶ್ರೀಪಾ.ಮ.), ಮುಳಬಾಗಿಲು
೨೮.೦೩.೧೦: ಶ್ರೀಸತ್ಯಪ್ರಿಯತೀರ್ಥರು (ಉ.ಮ.), ಮನಾಮಧುರೆ
೩೦.೦೩.೧೦: ಶ್ರೀಮುನೀಂದ್ರತೀರ್ಥರು (ರಾ.ಮ.), ಶ್ರೀರಂಗ

*****

## ಶ್ರೀವ್ಯಾಸಮಧ್ವ ಮಾಸಪತ್ರಿಕೆ

ಶ್ರೀವ್ಯಾಸಮಧ್ವ ಮಾಸಪತ್ರಿಕೆಯು ಮಾರ್ಚ್ ೨೦೦೮ ರಿಂದ ಪ್ರಕಾಶನಗೊಳ್ಳುತ್ತಿದೆ. ಶ್ರೀ ಶ್ರೀಪಾದರ ಲೇಖನಗಳು, ಬಗೆಬಗೆಯ ಅಪೂರ್ವ ಚಿತ್ರಗಳು, ಮಾಸದ ವಿಶೇಷಗಳು, ಭಗವದ್ರೂಪಗಳ, ಭಗವದ್ಭಕ್ತರ ಚರಿತ್ರೆಗಳು, ವ್ರತ ಉಪವಾಸಗಳ ವಿವರಗಳು, ಜ್ಞಾನಿಗಳ ಕೃತಿಗಳ ಪರಿಚಯ, ಹರಿದಾಸರ ಕೃತಿಗಳ ಬಗ್ಗೆ ಮಾಹಿತಿ ಮೊದಲಾದ ಅನೇಕ ಉಪಯುಕ್ತ ಲೇಖನಗಳಿಂದಾಗಿ ಈಗಾಗಲೇ ಗಣನೀಯ ಸಂಖ್ಯೆಯ ಓದುಗಬಳಗವನ್ನು ಪತ್ರಿಕೆ ಹೊಂದಿದೆ.

ಅನೇಕ ಆಸ್ತಿಕ ಮಹನೀಯರು ಪೋಷಕರು ಮೊದಲಾದ ರೂಪದಲ್ಲಿ ಪತ್ರಿಕೆಯ ಪ್ರಕಾಶನಕ್ಕೆ ನೆರವಾಗುತ್ತಿದ್ದಾರೆ. ಇನ್ನೂ ಅನೇಕರು ತಮ್ಮಿಂದ ಸಾಧ್ಯವಾದ ರೀತಿಯಲ್ಲಿ ನೆರವು ನೀಡಲು ಮುಂದಾಗಿರುವರು. ಅದಕ್ಕೆ ಸಲಹೆ ಹೀಗಿದೆ:

**ಈಗಾಗಲೇ ಚಂದಾದಾರರಾಗಿರುವವರು ಕನಿಷ್ಠ ಇನ್ನೊಬ್ಬ ಚಂದಾದಾರರನ್ನು ಒದಗಿಸಿಕೊಟ್ಟಲ್ಲಿ ಪತ್ರಿಕೆ ಇನ್ನು ಹೆಚ್ಚು ಉಪಯುಕ್ತರೀತಿಯಲ್ಲಿ ಪ್ರಕಾಶನಗೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಉತ್ತಮ ಪ್ರತಿಕ್ರಿಯೆಯನ್ನು ಪತ್ರಿಕೆ ನಿರೀಕ್ಷಿಸುತ್ತದೆ.**

## ಅಂತರ್ಜಾಲದ ಮೂಲಕ ನೇರವಾಗಿ ಭಾಗವತದ ಪಾಠ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರು ಕಳೆದ ಒಂದು ವರ್ಷದಿಂದ ಪ್ರತಿನಿತ್ಯ ಬೆಳಿಗ್ಗೆ ೮.೦೦ ರಿಂದ ೯.೩೦ರವರೆಗೆ ಶ್ರೀಮದ್ಭಾಗವತದ ಪಾಠವನ್ನು 'ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ'ದ ಸಭಾಂಗಣದಲ್ಲಿ ನಡೆಸಿಕೊಡುತ್ತಿರುವರು. ಪರಮಪೂಜ್ಯ ಶ್ರೀಪಲಿಮಾರು ಮಠಾಧೀಶರಾದ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ಅನುಗ್ರಹದಿಂದ ಜಿಜ್ಞಾಸುಗಳ ಅನುಕೂಲಕ್ಕಾಗಿ ಈಗ ಅಂತರ್ಜಾಲದ ಮೂಲಕ ಪಾಠವನ್ನು ನೇರಪ್ರಸಾರ ಮಾಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಆಸಕ್ತರು ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಅಂತರ್ಜಾಲದ ವಿಳಾಸ: www.livepravachana.com

ಸಮಯ: ಬೆಳಿಗ್ಗೆ ೮.೦೦ ರಿಂದ ೯.೩೦ ಘಂಟೆವರೆಗೆ

## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನದ ನಿರ್ದೇಶಕರ ಕಾರ್ಯಕ್ರಮಗಳು

೧೩-೦೨-೧೦ ಬೆಳಿಗ್ಗೆ ೧೧.೩೦ ಘಂಟೆಗೆ ಪ್ರವಚನ
ವಿಷಯ: **ದಾಸಸಾಹಿತ್ಯ**
ಸ್ಥಳ: ಶ್ರೀಸರಸ್ವತೀಕಲ್ಯಾಣಮಂಟಪ, ಶ್ರೀರಾಘವೇಂದ್ರಮಠ, ದೇವಗಿರಿ, ಬೆಂಗಳೂರು

೧೪-೦೨-೧೦ ಮಧ್ಯಾಹ್ನ ೩.೦೦ ಘಂಟೆಗೆ ವಿಚಾರಸಂಕಿರಣ
ಪರಮಪೂಜ್ಯ ಶ್ರೀಪೇಜಾವರಮಠಾಧೀಶರಾದ
ಶ್ರೀವಿಶ್ವೇಶತೀರ್ಥಶ್ರೀಪಾದಂಗಳವರ ದಿವ್ಯ ಉಪಸ್ಥಿತಿಯಲ್ಲಿ
ವಿಷಯ: **ಮಹಾಭಾರತಯುದ್ಧದಲ್ಲಿ ಶ್ರೀಕೃಷ್ಣನ ಪಾತ್ರ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೬-೦೨-೧೦ ಸಂಜೆ ೬.೦೦ ಘಂಟೆಗೆ ವಿಚಾರಗೋಷ್ಠಿ
**ಇತಿಹಾಸಪುರಾಣಗಳಿಗೆ ಶ್ರೀಮಧ್ವಾಚಾರ್ಯರ ಕೊಡುಗೆ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೭-೦೨-೧೦ ಸಂಜೆ ೪.೦೦ ಘಂಟೆಗೆ ವಿಚಾರಗೋಷ್ಠಿ
**ಸೂತ್ರಪ್ರಸ್ಥಾನಕ್ಕೆ ಶ್ರೀಮಧ್ವಾಚಾರ್ಯರ ಕೊಡುಗೆ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೭-೦೨-೧೦ ಸಂಜೆ ೬.೩೦ ಘಂಟೆಗೆ ವಿಚಾರಗೋಷ್ಠಿ
**ಗೀತಾಪ್ರಸ್ಥಾನಕ್ಕೆ ಶ್ರೀಮಧ್ವಾಚಾರ್ಯರ ಕೊಡುಗೆ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೨೮-೦೨-೧೦ರವರೆಗೆ, ಸಂಜೆ ೬.೦೦ ಘಂಟೆಗೆ
**(ಕನ್ನಡಲಿಪಿಯ) ಸರ್ವಮೂಲಗ್ರಂಥಗಳು ಹಾಗೂ ಇತರ ಅನೇಕ ಗ್ರಂಥಗಳ ಬಿಡುಗಡೆ ಕಾರ್ಯಕ್ರಮ**
ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

೪-೦೩-೧೦ ಸಂಜೆ ೬.೩೦ ಘಂಟೆಗೆ ಪ್ರವಚನ
**ಶ್ರೀವ್ಯಾಸರಾಜರು-ಶ್ರೀವಾದಿರಾಜರು**
ಸ್ಥಳ: ಶ್ರೀವ್ಯಾಸಮಧ್ವಸಭಾಂಗಣ, ಬೆಂಗಳೂರು



## ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ, ಬೆಂಗಳೂರು-೧೯.
ದೂರವಾಣಿ: ೦೮೦-೨೬೬೦೨೮೦೨/೨೬೬೧೧೦೧೧

**ದಿನಾಂಕ: ೨೮-೦೨-೨೦೧೦, ಭಾನುವಾರದಂದು ಸಂಜೆ ೬ ಘಂಟೆಗೆ**

### ಬಿಡುಗಡೆಯಾಗಲಿರುವ ನಮ್ಮ ಪ್ರಕಾಶನದ ಗ್ರಂಥಗಳು

೧) **ಕನ್ನಡಲಿಪಿಯಲ್ಲಿ ಸರ್ವಮೂಲಗ್ರಂಥಗಳು** (೬ ಸಂಪುಟಗಳಲ್ಲಿ)

೨) **ಶ್ರೀಹರಿಕಥಾಮೃತಸಾರ**
(ಶ್ರೀಕಮಲಾಪತಿದಾಸರ ಭಾವದರ್ಪಣ ವ್ಯಾಖ್ಯಾನ ಸಮೇತ)

೩) **ಸರ್ವಮೂಲಸೌರಭ** (ಸರ್ವಮೂಲಗ್ರಂಥಗಳ ಪರಿಚಯಾತ್ಮಕಕೃತಿ)

೪) **ಶ್ರೀವ್ಯಾಸತೀರ್ಥರ 'ಈಶಾವಾಸ್ಯಭಾಷ್ಯಟೀಕಾ'**
(ಶ್ರೀವ್ಯಾಸತೀರ್ಥರ ಅಪ್ರಕಾಶಿತಕೃತಿ)

೫) **ಶ್ರೀವಾದಿರಾಜಕೃತಿಮಂಜರೀ**
(ಶ್ರೀವಾದಿರಾಜರ ಜೀವನ ಹಾಗೂ ಕೃತಿಗಳ ಪರಿಚಯ)

೬) **ಶ್ರೀವಾದಿರಾಜಕೃತ 'ಪೂಜಾಕಲ್ಪ'**
(ಶ್ರೀವಾದಿರಾಜಸ್ವಾಮಿಗಳ ಅಪ್ರಕಾಶಿತಕೃತಿ)

೭) **ಶ್ರೀಮದಾಚಾರ್ಯರ 'ಬಿಲ್ವಮಂಗಲಃ ಸಾಧುಃ'**
(ಶ್ರೀವಿಜ್ಞಾನತೀರ್ಥರ ಹಾಗೂ
ಶ್ರೀಸತ್ಯಪರಾಯಣತೀರ್ಥರ ವ್ಯಾಖ್ಯಾನಗಳ ಸಮೇತ)

೮) **ಶ್ರೀವಿಜಯದಾಸದರ್ಶನ**
(ಶ್ರೀವಿಜಯದಾಸರ ಜೀವನ ಹಾಗೂ ಕೃತಿಗಳ ಅವಲೋಕನ)

೯) **ಶ್ರೀಪೂರ್ಣಪ್ರಜ್ಞದರ್ಶನ (ತಮಿಳು)**

೧೦) **ವೈಷ್ಣವಸ್ತೋತ್ರಮಂಜರೀ**

ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

ಪಾಜಕ, ೮೯/೨೪, ೩ನೇ ಅಡ್ಡರಸ್ತೆ, ಮೌಂಟ್‌ಜಾಯ್ ಎಕ್ಸ್‌ಟೆನ್ಷನ್, ಹನುಮಂತನಗರ, ಬೆಂಗಳೂರು-೧೯.

ದೂರವಾಣಿ: ೦೮೦-೨೬೬೦೨೮೦೨/೨೬೬೧೧೦೧೧

**ಕನ್ನಡ ಲಿಪಿಯಲ್ಲಿ**

**ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ**

## ಸರ್ವಮೂಲಗ್ರಂಥಗಳ ಬಿಡುಗಡೆ

**ದಿನಾಂಕ: ೨೮-೦೨-೨೦೧೦, ಭಾನುವಾರ ಸಂಜೆ ೬.೦೦ ಘಂಟೆಗೆ**

**ಸ್ಥಳ: ಶ್ರೀಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು**

**ದಿವ್ಯ ಉಪಸ್ಥಿತಿ:**

೧) ಪರಮಪೂಜ್ಯ ಶ್ರೀವಿಶ್ವೇಶತೀರ್ಥಶ್ರೀಪಾದರು,
ಶ್ರೀಪೇಜಾವರಮಠ, ಉಡುಪಿ

೨) ಪರಮಪೂಜ್ಯ ಶ್ರೀವಿದ್ಯಾಧೀಶತೀರ್ಥಶ್ರೀಪಾದರು,
ಶ್ರೀಪಲಿಮಾರುಮಠ, ಉಡುಪಿ

೩) ಪರಮಪೂಜ್ಯ ಶ್ರೀವಿಜ್ಞಾನನಿಧಿತೀರ್ಥಶ್ರೀಪಾದರು,
ಶ್ರೀಶ್ರೀಪಾದರಾಜಮಠ

೪) ಪರಮಪೂಜ್ಯ ಶ್ರೀವಿದ್ಯೇಶತೀರ್ಥಶ್ರೀಪಾದರು, ಶ್ರೀಭಂಡಾರಕೇರಿಮಠ

೫) ಪರಮಪೂಜ್ಯ ಶ್ರೀಕೇಶವನಿಧಿತೀರ್ಥಶ್ರೀಪಾದರು,
ಶ್ರೀಶ್ರೀಪಾದರಾಜಮಠ (ಕಿರಿಯಪಟ್ಟ)

**ಮುಖ್ಯ ಅತಿಥಿಗಳು : ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ**

**ದಿನಾಂಕ ೨೬, ೨೭ ಫೆಬ್ರವರಿ ೨೦೧೦ರಂದು ಸರ್ವಮೂಲಗ್ರಂಥಗಳ ಬಗ್ಗೆ ವಿದ್ವಾಂಸರಿಂದ ವಿಚಾರಗೋಷ್ಠಿಗಳು ನಡೆಯಲಿವೆ; ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.**

ವಿ.ಸೂ.:

೧) ಪ್ರಕಾಶನಪೂರ್ವಬೆಲೆಯನ್ನು ಸಲ್ಲಿಸಿರುವವರು ಅಧಿಕೃತ ರಸೀತಿಯನ್ನು ತೋರಿಸಿ ಅಂದೇ ಗ್ರಂಥಗಳನ್ನು ಪಡೆದುಕೊಳ್ಳಬಹುದು. ಪರ ಊರಿನವರು ನಮ್ಮ ಪ್ರತಿಷ್ಠಾನದ ಕಾರ್ಯಾಲಯವನ್ನು ದಿನಾಂಕ ೨೮.೦೨.೧೦ರ ನಂತರ ಸಂಪರ್ಕಿಸಿ ಪ್ರತಿಗಳನ್ನು ಪಡೆದುಕೊಳ್ಳಬಹುದು.

೨) ರೂ. ೧೫,೦೦೦/- ನೀಡಿ ನಮ್ಮ ಪ್ರತಿಷ್ಠಾನಕ್ಕೆ ಸದಸ್ಯರಾಗುವವರಿಗೆ ಸರ್ವಮೂಲಗ್ರಂಥಗಳು, ಸುಮಧ್ವವಿಜಯ, ಹರಿಕಥಾಮೃತಸಾರ, ಮಹಾಭಾರತತಾತ್ಪರ್ಯನಿರ್ಣಯ ಮೊದಲಾಗಿ ಹಿಂದೆ ಪ್ರಕಾಶಿತವಾದ ಹಾಗೂ ಮುಂದೆ ಪ್ರಕಾಶನಗೊಳ್ಳುವ ಎಲ್ಲ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

# ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ (ರಿ.)

Website: www.vyasamadhwa.org Ph:26602802 Email: info@vyasamadhwa.org

## ಸಂಸ್ಥೆಯ ಪ್ರಮುಖ ಯೋಜನೆಗಳು

೧) ಪ್ರಾಚೀನ ಸಂಸ್ಕೃತ ಹಸ್ತಪ್ರತಿಗ್ರಂಥಗಳನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂರಕ್ಷಿಸುವುದು; ಈಗಾಗಲೇ ೨೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ, ತನ್ನ 'ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ'ದಲ್ಲಿ ಸಂರಕ್ಷಿಸುತ್ತಿದೆ.

೨) ಶ್ರೀವ್ಯಾಸಮಧ್ವರ ಕೃತಿಗಳ ಅನುವಾದ ಹಾಗೂ ವಿವರಣೆಗಳನ್ನೊಳಗೊಂಡ ಕೃತಿಗಳನ್ನು, ಹರಿದಾಸಸಾಹಿತ್ಯವನ್ನು ಪ್ರಕಾಶನಪಡಿಸುವುದು (ಐತರೇಯಪ್ರಕಾಶನ); ಈಗಾಗಲೇ ೩೦೦೦೦ ಪುಟಗಳಿಗೂ ಮೀರಿದ ಸಾಹಿತ್ಯವನ್ನು ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಾಶನ ಪಡಿಸಲಾಗಿದೆ.

೩) 'ಶ್ರೀರಾಘವೇಂದ್ರ ವೇದಾಂತಪಾಠಶಾಲಾ' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿ, ಪ್ರತಿನಿತ್ಯ ಸರ್ವಮೂಲಗ್ರಂಥಗಳ ಪಾಠ-ಪ್ರವಚನ, ಸ್ತೋತ್ರಪಾಠ ಇತ್ಯಾದಿಗಳನ್ನು ಅನೇಕ ವರ್ಷಗಳಿಂದ ನಿರಂತರ ನಡೆಸುತ್ತಾ ಬಂದಿದೆ.

೪) 'ಶ್ರೀವ್ಯಾಸಮಧ್ವಸೇವಾಪುರಸ್ಕಾರ ಯೋಜನೆ': ಶ್ರೀವ್ಯಾಸಮಧ್ವರ ಸೇವೆ ಸಲ್ಲಿಸಿದ ವೃದ್ಧ ವಿದ್ವಾಂಸರಿಗೆ ಪ್ರತಿತಿಂಗಳು ಮಾಸಿಕ ಗೌರವಧನವನ್ನು ಆಜೀವ ಸಲ್ಲಿಸುವುದು; ಪ್ರಕೃತ ೨೬ ವಿದ್ವಾಂಸರಿಗೆ ರೂ. ೧೦೦೦/-ಗಳನ್ನು ಸಲ್ಲಿಸುತ್ತಿದೆ.

೫) ಶ್ರೀವ್ಯಾಸಮಧ್ವರ ಕೃತಿಗಳನ್ನು ಅಧ್ಯಯನ ಮಾಡುತ್ತ, ಲೌಕಿಕ ವಿದ್ಯೆಯ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕಸಹಾಯ ನೀಡುವುದು.

೬) ಪ್ರತಿವರ್ಷ ಒಬ್ಬ ಶ್ರೇಷ್ಠ ಹಿರಿಯವಿದ್ವಾಂಸರಿಗೆ ರೂ. ೧೨,೦೦೦/-ಗಳ 'ಶ್ರೀವ್ಯಾಸಮಧ್ವ-ಸೇವಾಪ್ರಶಸ್ತಿ'.

೭) ಮಹಾಭಾರತತಾತ್ಪರ್ಯನಿರ್ಣಯವನ್ನು ಪೂರ್ಣಕಂಠಪಾಠ ಒಪ್ಪಿಸುವ ವಿದ್ಯಾರ್ಥಿಗೆ ರೂ.೨೫,೦೦೦/- ಪ್ರಶಸ್ತಿ, ಸುಮಧ್ವವಿಜಯವನ್ನು ಒಪ್ಪಿಸುವ ವಿದ್ಯಾರ್ಥಿಗೆ 'ಶ್ರೀಮಧ್ವಪ್ರಿಯ' ಪ್ರಶಸ್ತಿ, ಹಾಗೂ ಹರಿಕಥಾಮೃತಸಾರವನ್ನು ಒಪ್ಪಿಸುವ ವಿದ್ಯಾರ್ಥಿನಿಗೆ 'ದಾಸಪ್ರಿಯ' ಪ್ರಶಸ್ತಿಪ್ರದಾನ.

೮) ಶ್ರೀವ್ಯಾಸಮಧ್ವರನ್ನು ಹಾಗೂ ಅವರ ಕೃತಿಗಳನ್ನು ಕುರಿತ ಸಂಶೋಧನಕೃತಿಗಳ ಪ್ರಕಾಶನಕ್ಕೆ ಆರ್ಥಿಕ ಸಹಾಯ.

೯) ಯುವಜನತೆಯಲ್ಲಿ ತಾತ್ತ್ವಿಕಜಾಗೃತಿಯನ್ನು ಉಂಟು ಮಾಡಲು ಕಾಲಕಾಲಕ್ಕೆ ಶ್ರೀವ್ಯಾಸಮಧ್ವರ ತತ್ತ್ವಗಳ ಬಗ್ಗೆ ಕಾರ್ಯಾಗಾರಗಳನ್ನು, ವಿಚಾರಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ಏರ್ಪಡಿಸುವುದು.

ಅಪಾರವೆಚ್ಚದ ಈ ಎಲ್ಲ ಯೋಜನೆಗಳಿಗಾಗಿ ಪ್ರತಿಷ್ಠಾನವು ಯಾವುದೇ ರೀತಿಯ ದೇಣಿಗೆಯನ್ನು ಆಸ್ತಿಕಜನತೆಯಿಂದ ಸ್ವಾಗತಿಸುತ್ತದೆ. ರೂ.೧೫,೦೦೦/- ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತದ ದೇಣಿಗೆಯನ್ನು ನೀಡುವವರಿಗೆ ಮಹಾಭಾರತತಾತ್ಪರ್ಯನಿರ್ಣಯ ಹಾಗೂ ಹರಿಕಥಾಮೃತಸಾರಗಳ ಅನುವಾದಗಳು ಸೇರಿದಂತೆ ಪ್ರತಿಷ್ಠಾನದ ಪ್ರಕಾಶನದಲ್ಲಿ ಲಭ್ಯವಿರುವ ಎಲ್ಲಾ ಗ್ರಂಥಗಳನ್ನು ಉಚಿತವಾಗಿ ನೀಡಲಾಗುವುದು.

ವಿಶೇಷ ಸೂಚನೆ : ದೇಣಿಗೆಗಳನ್ನು ''ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ(ರಿ.)'', ಬೆಂಗಳೂರು - ಈ ಹೆಸರಿಗೆ ನಗದು/ಚೆಕ್/ಡ್ರಾಫ್ಟ್ ಮೂಲಕ ಸಲ್ಲಿಸಿ ಅಧಿಕೃತ ರಸೀತಿಯನ್ನು ಪಡೆಯತಕ್ಕದ್ದು.